ಕರ್ನಾಟಕ ಸರ್ಕಾರ

ಸಹಾಯಕ ನಿಯಂತ್ರಕರ ಕಚೇರಿ

ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಬೆಳಗಾವಿ.

ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು, ಬೆಳಗಾವಿ

ಸನ್ 2017–18 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ
ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು, ಕಾಡಾ ಬೆಳಗಾವಿ ಮಾದರಿ

ಕ್ರ.ಸಂ	ವರ್ಷ	ಲೆಕ್ಕಪತ್ರಗಳನ್ನು ವರ್ಷವಾರು ಪೂರ್ಣಗೊಳಿಸಿ ಲೆಕ್ಕಪರಿಶೋಧನೆಗೆ ಸಿದ್ದಪಡಿಸಬೇಕಾದ ದಿನಾಂಕ	ವರ್ಷವಾರು ಲೆಕ್ಕಪತ್ರಗಳನ್ನು ಸಿದ್ದಪಡಿಸಿದ ದಿನಾಂಕ	ವಿಳಂಬಕ್ಕೆ ಯಾವುದಾದರು ಕಾರಣಗಳು ಇದ್ದರೆ	ರಾಜ್ಯ ಲೆಕ್ಕ ಪತ್ರ ಇಲಾಖೆಗೆ ಲೆಕ್ಕ ಪರಿಶೋಧನೆ ನಡೆಸಲು ಕೋರಿ ಬರೆದ ಪತ್ರ ಉಲ್ಲೇಖ ಮತ್ತು ದಿನಾಂಕ	ಲೆಕ್ಕ ಪರಿಶೋಧನೆ ಪ್ರಾರಂಭಿಸಿದ ದಿನಾಂಕ ಮತ್ತು ಪೂರ್ಣಗೊಳಿಸಿದ ದಿನಾಂಕ	ಲೆಕ್ಕಪರಿಶೋಧನೆಯ ಪ್ರಮಾಣ ಪತ್ರವನ್ನು ನೀಡಿದ ಪತ್ರ ಉಲ್ಲೇಖ ಮತ್ತು ದಿನಾಂಕ	ಅವುಗಳನ್ನು ಅಚ್ಚುಗಾಗಿ ನೀಡಿದ ಮತ್ತು ಅಚ್ಚುಪ್ರತಿಗಳನ್ನು ಸ್ವೀಕರಿಸಿ ದಿನಾಂಕ	ಪ್ರತಿಗಳನ್ನು ಶಾಸಕಾಂಗ ಸಭೆಯಲ್ಲಿ ಮಂಡಿಸಲು ಸಚಿವಾಲಯಕ್ಕೆ ಸಲ್ಲಿಸಿದ ಪತ್ರದ ಉಲ್ಲೇಖ ಹಾಗೂ ದಿನಾಂಕ	ಶಾಸಕಾಂಗ ಸಭೆಯಲ್ಲಿ ಮಂಡಿಸಲು ಉಂಟಾದ ವಿಳಂಬಕ್ಕೆ ಕಾರಣಗಳು
1	2	3	4	5	6	7	8	9	10	11
1)	2017-18	10-4-2018	30-4-2018	ವಿಭಾಗ/ಉಪವಿಭಾಗಗಳಿಂದ ಮಾಸಿಕ ವೆಚ್ಚ ಪತ್ರಿಕೆ ತಡವಾಗಿ ಬಂದ ಕಾರಣ ವಿಳಂಬವಾಗಿದೆ.	ಕ್ರ.ಸಂ/ಮಫಯೋ/ಕಾಡಾ/ ಮುಲೆಅ/ಲೆಕ್ಕ-3/ಅಡಿಟ್/ 2018-19/67 ದಿ:21-01-2019	ಲೆಕ್ಕ ಪರಿಶೋಧನಾ ಪ್ರಾರಂಭಸಿದ ದಿ:28-11-18 ರಿಂದ 18-12-18 ರವರೆಗೆ ಹಾಗೂ ದಿ:23-02-19ಕ್ಕೆ ಮರು ಪರಿಶೀಲನೆ ಮಾಲಾಗಿದೆ.	ಸಂ/ಪ್ರಾಂ.ಕ.ಬೆ/ ಕಾಡಾ/ಲೆ.ಪ.ವ 2018-19/1778 ದಿ:18-03-19	ದಿ: 21-06-19 ರಂದು ಅಚ್ಚಿಗಾಗಿ ನೀಡಿದ್ದು ದಿ: - -19 ರಂದು ಸ್ವೀಕರಿಸಿದೆ.	ಮಫಯೋ/ಕಾಡಾಬೆ/ ಮುಲೆಅ/ಎಸಿಟಿ-2/ ಲೆಪವರದಿ /2017-18/19-20 ದಿ:	ಲೆಕ್ಕ ಪರಿಶೋಧನಾ ವರದಿ 21-03-2019 ರಂದು ಈ ಕಚೇರಿಯಲ್ಲಿ ಸ್ವೀಕರಿಸಿದ್ದು ಮುದ್ರಣಕ್ಕೆ ದಿ:21-06-2019ರಂದು ನೀಡಿದ್ದು ದಿ: - -19 ರಂದು ಮುದ್ರಿತ ವರದಿ ಸ್ವೀಕರಿಸಿದೆ ದಿ: - -19 ರಂದು ಶಾಸಕಾಂಗ ಸಭೆಯಲ್ಲಿ ಮಂಡಿಸಲು ರವಾನಿಸಿದೆ.

ಆಡಳಿತಾಧಿಕಾರಿಗಳು
ಕಾಡಾ ಮಲಪ್ರಭಾ ಮತ್ತು ಘಟಪ್ರಭಾ
ಯೋಜನೆಗಳು, ಬೆಳಗಾವಿ

Note for Late Report 2017-18

ವಿಳಂಬಕ್ಕೆ ಟಿಪ್ಪಣಿ

ಅಪರ ನಿರ್ದೇಶಕರು ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ/ಪ್ರಾಂ.ಕ.ಬೆ/ಕಾಡಾ/ಲೆ.ಪ.ವ–2018–19/1778 ದಿನಾಂಕ:18–03–2019 ರ ಪ್ರಕಾರ ಈ ಕಚೇರಿಗೆ ಸಲ್ಲಿಸಲಾದ 2017–18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯು ಈ ಕಚೇರಿಗೆ ದಿನಾಂಕ:21–03–2018ರಂದು ತಲುಪಿದ್ದು, ಸರಕಾರಿ ಮುದ್ರಣಾಲಯದಿಂದ ಮುದ್ರಣಗೊಳಿಸಿ ಶಾಸಕಾಂಗ ಸಭೆಯಲ್ಲಿ ಮಂಡಿಸಲು ದಿನಾಂಕ: – –2019 ರಂದು ಸಲ್ಲಿಸಿದ್ದು ವಿಳಂಬವಾಗಿರುತ್ತದೆ.

ಆಡಳಿತಾಧಿಕಾರಿಗಳು
ಕಾಡಾ ಮಲಪ್ರಭಾ ಮತ್ತು ಘಟಪ್ರಭಾ
ಯೋಜನೆಗಳು, ಬೆಳಗಾವಿ.

OFFICE OF THE
ADDITIONAL DIRECTOR
KARNATAKA STATE AUDIT
AND ACCOUNTS DEPARTMENT
REGIONAL OFFICE
O/O KARNATAKA STATE SEEDS CORPORATION
LTD, C.T.S NO:4807/A-1 R.S NO:980 J.D.A OFFICE
COMPOUND, 1st FLOOR,
SHIVAJI NAGAR, BELAGAVI- 590016
Phone No:0831-2454090
Email Id: adrobelagavi@gmail.com

(ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ)

ಅಪರ ನಿರ್ದೇಶಕರು,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು
ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಚೇರಿ
ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ
ಕಚೇರಿ ಕಟ್ಟಡ ಸಿ.ಟಿ.ಎಸ್. ನಂ: 4807/ಎ-1
ಆರ್.ಎಸ್. ನಂ:980 ಜೆ.ಡಿ.ಎ ಕಚೇರಿ ಆವರಣ,
ಮೊದಲನೇ ಮಹಡಿ, ಶಿವಾಜಿನಗರ, ಬೆಳಗಾವಿ- 590016
ದೂರವಾಣಿ: 0831-2454090
Email Id: adrobelagavi@gmail.com

ಸಂ:ಪ್ರಾಂ.ಕ.ಬೆ/ಕಾಡಾ/ಲೆಪವ/2018-19/ 1778 ದಿನಾಂಕ:18/03/2019

ಇವರಿಗೆ

ಆಡಳಿತಾಧಿಕಾರಿಗಳು,
ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ(ಕಾಡಾ)
ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು,
ಬೆಳಗಾವಿ.

ಮಾನ್ಯರೆ,

ವಿಷಯ: ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು (ಕಾಡಾ) ಬೆಳಗಾವಿಯ 2017-18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಕಳುಹಿಸುವ ಕುರಿತು.

*****

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು (ಕಾಡಾ) ಬೆಳಗಾವಿ ಸಂಸ್ಥೆಯ 2017-18ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕಾಡಾ ಅಧಿನಿಯಮ, 1980 ಪ್ರಕರಣ 24(2) ರ ಪ್ರಕಾರ ಕೈಗೊಂಡು, ವರದಿಯನ್ನು ಈ ಪತ್ರದೊಂದಿಗೆ ಅಡಕವಿರಿಸಿ ಕಳುಹಿಸಿ ಕೊಡಲಾಗಿದೆ.

ಸದರಿ ವರದಿಗೆ ಅನುಸರಣಾ ವರದಿಯನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

ಅಡಕ:ಮೇಲಿನಂತೆ.

ತಮ್ಮ ವಿಶ್ವಾಸಿ,
ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ
ಪ್ರಾಂತೀಯ ಕಛೇರಿ ಬೆಳಗಾವಿ

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ(ಕಾಡಾ) ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಬೆಳಗಾವಿಯ ಸನ್ 2017–18 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು(ಕಾಡಾ) ಬೆಳಗಾವಿ 2017-18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುವ ನ್ಯೂನತೆಗಳ ವಿವರಗಳು:

ಅ.ನಂ	ಕಂಡಿಕೆ ಸಂಖ್ಯೆ	ಸಂಕ್ಷಿಪ್ತ ವಿವರ
1	2	3
1	2	ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಿತ ಮತ್ತು ವಸೂಲಾತಿಯ ಕಂಡಿಕೆಗಳು ಇತ್ಯರ್ಥಕ್ಕೆ ಬಾಕಿ ಕುರಿತು.
2	4	ಆಯವ್ಯಯ ಕುರಿತು.
3	5	ವಾರ್ಷಿಕ ಲೆಕ್ಕಪತ್ರ ಕುರಿತು
4	8	ಅನುದಾನ ಅಧ್ಯರ್ಪಣೆ ಕುರಿತು
5	10	ಮುಂಗಡ ಕುರಿತು.
6	11	ಹೂಡಿಕೆ ಕುರಿತು
7	12	ಹೂಡಿಕೆಯ ವ್ಯತ್ಯಾಸದ ಕುರಿತು.
8	23	ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಏಕಕಾಲಿಕ ಕಾರ್ಯನಿರ್ವಹಣಾ ಅನುದಾನ ಮಂಜೂರು ನೀಡುತ್ತಿರುವ ಬಗ್ಗೆ
9	24	ಕಾಡಾ ಪ್ರಾಧಿಕಾರದಲ್ಲಿ ದಿ: 01-04-2006 ರಂದು ಮತ್ತು ತದನಂತರದಲ್ಲಿ ಹೊಸದಾಗಿ ನೇಮಕಾತಿ ಹಾಗೂ ಕಾಡಾ ಪ್ರಾಧಿಕಾರಕ್ಕೆ ನಿಯೋಜನೆ ಮೇರೆಗೆ ಹಾಜರಾಗುವ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ಹೊಸ ಪಿಂಚಣಿ ಯೋಜನೆ(N.P.S) ಅನುಷ್ಠಾನ ಕುರಿತು
10	25	ಕಾಡಾ ಆಸ್ತಿ ವಹಿ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವ ಕುರಿತು
11	26	ಕಾಡಾ ಪ್ರಾಧಿಕಾರದ ವಸತಿ ಗೃಹಗಳ ಕುರಿತು
12	29	ಕಾಡಾ ಪ್ರಾಧಿಕಾರದಡಿ ಕೈಕೊಳ್ಳುವ ಟೆಂಡರ್ ಕಾಮಗಾರಿಗಳಲ್ಲಿ ಕಂಡುಬಂದ ನ್ಯೂನ್ಯತೆಗಳ ಬಗ್ಗೆ.

ತಮ್ಮ ವಿಶ್ವಾಸಿ

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ
ಪ್ರಾಂತೀಯ ಕಛೇರಿ ಬೆಳಗಾವಿ

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು(ಕಾಡಾ) ಬೆಳಗಾವಿ 2017–18ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಿಸಲಾದ ಮತ್ತು ವಸೂಲಾತಿಗೆ ಸೂಚಿಸಿದ ವಿವರಗಳು.

ಅನಂ	ಕಂಡಿಕೆ ಸಂಖ್ಯೆ	ಸಂಕ್ಷಿಪ್ತ ವಿವರ	ಆಕ್ಷೇಪಣೆ ಮೊತ್ತ	ವಸೂಲಾತಿ ಮೊತ್ತ
1	2	3	4	5
1	13	ಠೇವು ಮತ್ತು ಇ.ಎಂ.ಡಿ.ಗಳ ಬಗ್ಗೆ	1,41,16,232	–
2	27	ಹೆಚ್ಚುವರಿ ಕ್ರಿಯಾ ಯೋಜನೆ ಮೊತ್ತಗಳಿಗೆ ಸರ್ಕಾರದಿಂದ ಅನುಮೋದನೆಯಾದ ದಾಖಲೆ ಪೂರೈಸುವ ಕುರಿತು	12,08,58,000	–
3	28	ಕಾಮಗಾರಿ ಅವಧಿ ಮೀರಿ ಹೆಚ್ಚುವರಿ ಅವಧಿ ಪಡೆದು ಮುಕ್ತಾಯಗೊಳಿಸಿದ್ದು, ಹೆಚ್ಚುವರಿ ಅವಧಿಗೆ ದಂಡ ರಹಿತ ಅವಧಿ ವಿಸ್ತರಿಸುವ ಬಗ್ಗೆ	1,03,916	–
4	30	ವಿಶೇಷ ಸಾಲ ವಸೂಲಾತಿ ಕುರಿತು	1,57,646	–
5	31	ಪ್ರಾಧಿಕಾರದಡಿ ವಿಭಾಗಳಲ್ಲಿ ಸಿಂಗಲ್ ಟೆಂಡರ್ ಅನುಮೋದಿಸಿ ಕಾಮಗಾರಿ ಆದೇಶ ನೀಡಿರುವ ಬಗ್ಗೆ	1,14,64,873	–
6	32	ಗುತ್ತಿಗೆದಾರರಿಗೆ ಕಾಮಗಾರಿ ಆದೇಶ (Work Order) ನೀಡಿದ ತದನಂತ ಒಪ್ಪಂದ ಪತ್ರ ಭದ್ರತಾ ಠೇವಣಿ ಹಾಗೂ ಹೆಚ್ಚುವರಿ ಭದ್ರತಾ ಠೇವಣಿ ಪಡೆಯುತ್ತಿರುವ ಬಗ್ಗೆ	47,25,253	–
7	33	ರಾಮೇಶ್ವರ ಏತ ನೀರಾವರಿ ಯೋಜನೆಯನ್ನು ಕೈಕೊಳ್ಳುವ ಬಗ್ಗೆ	1,11,89,000	–
8	34	Construction of road from Hulikatti to Mallur road in Savadatti Taluka ಕಾಮಗಾರಿ ಬಗ್ಗೆ	24,33,092	–
		ಒಟ್ಟು	**16,50,48,012**	–

ತಮ್ಮ ವಿಶ್ವಾಸಿ

ಅಪರ ನಿರ್ದೇಶಕರು
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ
ಪ್ರಾಂತೀಯ ಕಛೇರಿ ಬೆಳಗಾವಿ

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು(ಕಾಡಾ) ಬೆಳಗಾವಿ ಸಂಸ್ಥೆಯ ಸನ್ 2017–18 ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

–: ಭಾಗ–1 :–

1) ಅ) ಸಾಮಾನ್ಯ ಪರಿಚಯ:–

1	ಸಂಸ್ಥೆಯ ಹೆಸರು	ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು(ಕಾಡಾ) ಬೆಳಗಾವಿ
2	ಲೆಕ್ಕ ಪರಿಶೋಧನಾ ಅವಧಿ	2017–18 (ದಿ:01–4–2017 ರಿಂದ 31–3–2018)
3	ಲೆಕ್ಕ ಪರಿಶೋಧಕರ ಹೆಸರು	ಶ್ರೀ. ಆರ್.ಎನ್.ವಂಜೀರೆ, ಲೆಕ್ಕ ಅಧಿಕ್ಷಕರು ಶ್ರೀ. ಟಿ.ಡಿ.ಬಿ.ಪಾಟೀಲ, ಲೆಕ್ಕ ಅಧಿಕ್ಷಕರು ಶ್ರೀ ಮಹೇಶ. ರಾಮಪ್ಪ. ಸನದಿ, ಲೆಕ್ಕ ಅಧೀಕ್ಷಕರು ಶ್ರೀ. ಎಸ್.ಎಮ್.ಮಲೋಡಿ, ಲೆಕ್ಕ ಪರಿಶೋಧಕರು ಶ್ರೀ.ಎಸ್.ಡಿ.ದಂಧರಗಿ, ಲೆಕ್ಕ ಪರಿಶೋಧಕರು
4	ಲೆಕ್ಕ ಪರಿಶೋಧನೆ ಪ್ರಾರಂಭ ದಿನಾಂಕ	28.11.2018
5	ಲೆಕ್ಕ ಪರಿಶೋಧನೆ ಮುಕ್ತಾಯ ದಿನಾಂಕ	18.12.2018
6	ಲೆಕ್ಕ ಪರಿಶೋಧನೆಗೆ ಉಪಯೋಗಿಸಿರುವ ಒಟ್ಟು ಮಾನವ ದಿನಗಳು	67 ಮಾನವ ದಿನಗಳು
7	ಮರು ಸಮೀಕ್ಷೆ ಮಾಡಿದ ಅಧಿಕಾರಿಗಳ ಹೆಸರು ಮತ್ತು ಹುದ್ದೆ	ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಛೇರಿ ಬೆಳಗಾವಿ.
8	ಮರು ಸಮೀಕ್ಷೆ ಮಾಡಿದ ದಿನಾಂಕ	23.02.2019

ಆ) ಸಂಸ್ಥೆಯ ಆಡಳಿತ ವರ್ಗದ ವಿವರ ಹಾಗೂ ಅಧಿಕಾರ ಅವಧಿ:-

1	ಅಧ್ಯಕ್ಷರು	ಶ್ರೀ.ಈರಗೌಡ.ಧೂಳಗೌಡ.ಪಾಟೀಲ	01-4-2017 ರಿಂದ 31-3-2018ರವರೆಗೆ
2	ಆಡಳಿತಾಧಿಕಾರಿಗಳು	1) ಶ್ರೀ.ಕೆ.ಎಫ್.ಹುಲಕುಂದ 2)ಶ್ರೀ.ಬಿ.ವಿ.ಪಾಟೀಲ(ಭಾ.ಆ.ಸೇ)	1-4-2017 ರಿಂದ 08-01-2018 ರವರೆಗೆ 08-01-2018 ರಿಂದ 31-3-2018 ರವರೆಗೆ
3	ಭೂ ಅಭಿವೃದ್ಧಿಅಧಿಕಾರಿ(ಕೃಷಿ)	ಶ್ರೀ.ಜೆ.ಕರುಣಾಕರ	1-4-2017 ರಿಂದ 31-3-2018 ರವರೆಗೆ
4	ಭೂ ಅಭಿವೃದ್ಧಿಅಧಿಕಾರಿ (ತಾಂತ್ರಿಕ)	ನಾರಾಯಣ ಎಮ್	01-04-2017 ರಿಂದ 31-03-2018 ರವರೆಗೆ
5	ಭೂ ಅಭಿವೃದ್ಧಿಅಧಿಕಾರಿ (ಸಹಕಾರ)	ಶ್ರೀಮತಿ.ರಾಜಶ್ರಿ.ಅಗಸರ	01-04-2017 ರಿಂದ 31-03-2018 ರವರೆಗೆ
6	ಉಪ ಆಡಳಿತಾಧಿಕಾರಿಗಳು	1) ಶ್ರೀ.ಜೆ.ಕರುಣಾಕರ (ಪ್ರಭಾರ) 2)ಶ್ರೀ.ಸಿ.ಜಿ.ಹಿರೇಮಠ	01-04-2017 ರಿಂದ 31-08-2017ರವರೆಗೆ 31-08-2017 ರಿಂದ 31-3-2018 ರವರೆಗೆ
7	ಮುಖ್ಯ ಲೆಕ್ಕಾಧಿಕಾರಿಗಳು	ಈರಣ್ಣ ಚಂದರಗಿ	1-4-2017 ರಿಂದ 31-03-2018 ರವರೆಗೆ

ಪೀಠಿಕೆ:

ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳ ನಿಯಮ 1980, ಅನುಚ್ಛೇಧ 24(2) ರ ಪ್ರಕಾರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು(ಕಾಡಾ) ಬೆಳಗಾವಿ ಸಂಸ್ಥೆಯ ಲೆಕ್ಕಪರಿಶೋಧನೆಯನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯಿಂದ ಕೈಗೊಳ್ಳಲಾಗಿದೆ.

ಭಾಗ–2

2) ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಿತ ಮತ್ತು ವಸೂಲಾತಿಯ ಕಂಡಿಕೆಗಳುಇತ್ಯರ್ಥಕ್ಕೆ ಬಾಕಿ ಕುರಿತು:–

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು(ಕಾಡಾ) ಬೆಳಗಾವಿಯ ಸನ್.2017–18ನೇ ಸಾಲಿನ ಲೆಕ್ಕಪರಿಶೋಧನೆ ವೇಳೆಯಲ್ಲಿ ಕರ್ನಾಟಕ ಬಜೆಟ್ ಕೈಪಿಡಿ ಪ್ಯಾರಾ ಸಂಖ್ಯೆ: 305 ರನ್ವಯ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ವಹಿಯನ್ನು ನಮೂನೆ ಸಂಖ್ಯೆ: 21ರಲ್ಲಿ ನಿರ್ವಹಿಸಿರುವ ಬಗ್ಗೆ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಸನ್.2016–17ನೇ ಸಾಲಿನ ಅಂತ್ಯಕ್ಕೆ 260 ಕಂಡಿಕೆಗಳಿಂದ ರೂ.36,33,35,100=00 ಆಕ್ಷೇಪಣೆ ಮೊತ್ತ ಮತ್ತು 266 ಪ್ಯಾರಾಗಳಿಂದ ರೂ.4,79,16,504=00 ವಸೂಲಾತಿ ಮೊತ್ತ ಇತ್ಯರ್ಥವಾಗದೇ ಬಾಕಿ ಉಳಿದಿರುತ್ತದೆ.

ಲೆಕ್ಕಪರಿಶೋಧನೆಯ ಮುಖ್ಯ ಉದ್ದೇಶವೂ ಲೋಪದೋಷಗಳನ್ನು ಸರಿಪಡಿಸಲು ಮತ್ತು ಅವುಗಳು ಮತ್ತೆ ಸಂಭವಿಸದಂತೆ ತಡೆಯುವ ಸಲುವಾಗಿ ಸೂಕ್ತ ಕ್ರಮಕೈಗೊಳ್ಳಲು ಇಲಾಖಾ ಅಧಿಕಾರಿಗಳಿಗೆ ಲೆಕ್ಕಪರಿಶೋಧನಾ ಫಲಿತಾಂಶಗಳ ಬಗ್ಗೆ ವರದಿ ಮಾಡಲಾಗುತ್ತದೆ. ಆದರೆ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳ ಇತ್ಯರ್ಥದ ವಿಲೆಯಲ್ಲಿನ ವಿಳಂಬವು ಲೆಕ್ಕಪರಿಶೋಧನೆಯ ಮುಖ್ಯ ಉದ್ದೇಶವನ್ನೇ ನಿಷ್ಫಲಗೊಳಸುತ್ತಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಅಷ್ಟೇ ಅಲ್ಲದೆ, ಸಕಾಲಿಕ ಗಮನ ನೀಡದಿರುವ ಕಾರಣದಿಂದ ಹಣ ದುರುಪಯೋಗ ಮತ್ತು ತೀವ್ರತರ ಅಕ್ರಮಗಳು ಪತ್ತೆಯಾಗದೆ ಉಳಿಯುವ ಸಂಭವಿದ್ದು, ಈ ಕಾರಣಗಳಿಂದಾಗಿ ನಿವಾರಿಸಲು ಸಾಧ್ಯವಿಲ್ಲದಿರುವಂಥ ನಷ್ಟವನ್ನು ಅದು ಒಳ್ಳಗೊಳ್ಳಬಹುದು ಅದೂ ಅಲ್ಲದೆ, ಸಮಯ ಕಳೆದಂತೆ ಸಂಬಂಧಿಸಿದ ದಾಖಲೆಗಳು ಸಿಗದಿರುವ ತೊಂದರೆಗಳ ಕಾರಣದಿಂದಾಗಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಮತ್ತು ನೌಕರರ ವರ್ಗಾವಣೆ, ನಿವೃತ್ತಿ ಅಥವಾ ವಜಾ ಇವುಗಳಿಂದ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳನ್ನು ಇತ್ಯರ್ಥಗೊಳಿಸುವಲ್ಲಿ ತುಂಬಾ ಹಿನ್ನಡೆಉಂಟಾಗಿ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳ ಸಂಖ್ಯೆ ಮತ್ತು ಆಕ್ಷೇಪಣೆಗೆ ಹಾಗೂ ವಸೂಲಾತಿಗೆ ಗುರಿಯಾದ ಮೊತ್ತವು ಹೆಚ್ಚುತ್ತಲೇ ಇರಬಹುದಾಗಿದೆ

ಕಾರಣ ಕರ್ನಾಟಕ ಬಜೆಟ್ ಕೈಪಿಡಿ ಪ್ಯಾರಾ ಸಂಖ್ಯೆ: 305 ರನ್ವಯ ನಮೂನೆ ಸಂಖ್ಯೆ:21ರಲ್ಲಿ ವಹಿಯನ್ನು ನಿರ್ವಹಿಸಿ ಪ್ಯಾರಾ ಸಂಖ್ಯೆ: 307 ಮತ್ತು 308 ರನ್ವಯ ಕಚೇರಿಯ ಮುಖ್ಯಾಧಿಕಾರಿಗಳು ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳ ವಹಿಯನ್ನು ಪರಿಶೀಲಿಸುವುದು ಅವಶ್ಯಕತೆ ಇರುತ್ತದೆ. ಅಲ್ಲದೆ ಪ್ಯಾರಾ ಸಂಖ್ಯೆ:303 ರನ್ವಯ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಉತ್ತರಿಸುವ ಮತ್ತು ಲೆಕ್ಕಪರಿಶೋಧನೆಯಲ್ಲಿ ತೋರಿಸಿರುವ ಇತರ ವಿಷಯಗಳನ್ನು ಇತ್ಯರ್ಥಗೊಳಿಸುವ ಹೊಣೆಗಾರಿಕೆಯು ಒಳಗೊಂಡು ವಿಷಯಗಳ ಸ್ವರೂಪ ಮತ್ತು ಜವಾಬ್ದಾರಿಗನುಗುಣವಾಗಿ ಪ್ರಮುಖವಾಗಿ ಬಟವಾಡೆ ಅಧಿಕಾರಿಗಳೇ ಹೊಣೆಗಾರರಾಗುತ್ತಾರೆ. ಕಾರಣ ಈ ಕಚೇರಿಗೆ ಅನುಸರಣೆಗಳನ್ನು ಸಲ್ಲಿಸುವ

ಕ್ರಮ ವಹಿಸಿದ್ದಲ್ಲಿ ಅವಶ್ಯಕ ಕ್ರಮಕೈಗೊಳ್ಳಲಾಗುವುದು. ಮತ್ತು ಕಾಡಾ ಪ್ರಾಧಿಕಾರದಿಂದ ಯಾವುದೇ ಅನುಸರಣೆಗಳು ಸ್ವೀಕೃತವಾಗಿರುವದಿಲ್ಲ. ಕಾರಣ ಕರ್ನಾಟಕ ಬಜೆಟ್ ಕೈಪಿಡಿ ಪ್ಯಾರಾ ಸಂಖ್ಯೆ: 304 ರನ್ವಯ 03 ತಿಂಗಳ ಅವಧಿಯ ಒಳಗಾಗಿ ಬಾಕಿ ಉಳಿದಿರುವ ಆಕ್ಷೇಪಣೆ ಮತ್ತು ವಸೂಲಾತಿ ಪ್ಯಾರಾಗಳ ಇತ್ಯರ್ಥಕ್ಕೆ ವಿಶೇಷ ಗಮನ ಹರಿಸಿ ಸೂಕ್ತ ಕ್ರಮ ಕೈಕೊಳ್ಳುವುದು. ಹಾಗೂ ಇತ್ಯರ್ಥಗೊಂಡ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಗೆ ಮಾಹಿತಿ ಪೂರೈಸಲು ಲೆ.ಪ.ವಿ.ಪತ್ರ .ಸಂ. 11 ದಿನಾಂಕ: 13-12-2018 ರಂದು ಕೋರಲಾಗಿತ್ತು. ಆದರೆ ಯಾವುದೇ ಅನುಸರಣೆಯನ್ನು ನೀಡಿರುವುದಿಲ್ಲ.

2017-18ನೇ ಸಾಲಿನ ಅಂತ್ಯಕ್ಕೆ ವರ್ಷವಾರು ಬಾಕಿ ಇರುವ ಕಂಡಿಕೆಗಳ ಸಂಖ್ಯೆ ಮತ್ತು ಮೊತ್ತಗಳ ವಿವರಗಳನ್ನು **ಅನುಬಂಧ -1** ರಲ್ಲಿ ನೀಡಲಾಗಿದೆ.

3) ಆರ್ಥಿಕ ಪರಿಸ್ಥಿತಿ:-

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು (ಕಾಡಾ) ಬೆಳಗಾವಿಯ 2017-18ನೇ ಸಾಲಿನ ಆರ್ಥಿಕ ಪರಿಸ್ಥಿತಿ ಈ ಕೆಳಗಿನಂತಿರುತ್ತದೆ.

ಕ್ರ ಸಂ	ಯೋಜನೆ ವಿವರ	ಬ್ಯಾಂಕಿನ ಹೆಸರು	ಖಾತೆ ಸಂಖ್ಯೆ	ಆರಂಭಿಕ ಶಿಲ್ಕು	2017-18ರಲ್ಲಿ ಜಮೆ	ಒಟ್ಟು	2017-18 ರಲ್ಲಿ ಖರ್ಚು	ಅಂತಿಮ ಶಿಲ್ಕು	ಬ್ಯಾಂಕ್ ಪಾಸ್ ಪುಸ್ತಕ ಶಿಲ್ಕು	ವ್ಯತ್ಯಾಸ
1	I)ಕಾಡಾ ಕಚೇರಿ 2705	ಎಸ್.ಬಿ.ಐ	606263	169346812	703214043	872560855	713606695	158954160	260475878	101521718
		ಹೂಡಿಕೆ		4799186	0	4799186	0	4799186	4799186	
		ಒಟ್ಟು		**174145998**	**703214043**	**877360041**	**713606695**	**163753346**	**265275064**	**101521718**
2	II ಕಾಡಾ ಕಚೇರಿ 2705	ಜಿಲ್ಲಾ ಖಜಾನೆ		430696	0	430696	0	430696	430696	
3	III ಹೂಡಿಕೆ	ಎಸ್.ಬಿ.ಐ ನಲ್ಲಿ ಹೂಡಿಕೆ		1000000	0	1000000	0	1000000	1000000	-
	I+II+III=ಒಟ್ಟು			**175576694**	**703214043**	**878790737**	**713606695**	**165184042**	**266705760**	**101521718**
4	IVವಿಶೇಷ ಅಭಿವೃದ್ಧಿ ಯೋಜನೆ	ಎಸ್.ಬಿ.ಐ	606263	650584	0	650584	0	650584	650584	-
5	V ನಮ್ಮ ಹೊಲ ನಮ್ಮ ರಸ್ತೆ	ಎಸ್.ಬಿ.ಐ	609037	5552861	206835	5759696	0	5759696	5759696	
	ಒಟ್ಟು IV+ V			**6203445**	**206835**	**6410280**	**0**	**6410280**	**6410280**	
	I+II+III+IV+V ಅಂತೂ ಒಟ್ಟು			**181780139**	**703420878**	**885201017**	**713606695**	**171594322**	**273116040**	**101521718**

ನಗದು ಪುಸ್ತಕ ಶಿಲ್ಕು ರೂ.16,37,53,346/- ಇದ್ದು ಇದರಲ್ಲಿ ಗುತ್ತಿಗೆದಾರರ ಠೇವಣಿ ರೂ.47,99,186/- ಶಿಲ್ಕು ಇರುತ್ತದೆ. ಅವು ನೇರವಾಗಿ ಹೂಡಿಕೆ ಮಾಡಲಾಗಿದ್ದು ಅದನ್ನು ಕಳೆಯಲಾಗಿ (163753346-4799186)=158954160 ನಗದು ಪುಸ್ತಕ ಶಿಲ್ಕು ಆಗಿರುತ್ತದೆ. ಈ ಮೊತ್ತದ ಮೇಲೆ ವ್ಯತ್ಯಾಸದ ಮೊತ್ತ ರೂ.10,15,21,718/- ಕ್ಕೆ ನಗದೀಕರಿಸದ ಚೆಕ್ಕಗಳು ವಿವರ ಹಾಗೂ ನಗದು ಪುಸ್ತಕಕ್ಕೆ ಬ್ಯಾಂಕ್‌ಪಾಸ ಪುಸ್ತಕ ಪ್ರಕಾರ ಸಮನ್ವಯಗೊಳಿಸಿದ ಬಗ್ಗೆ **ಅನುಬಂಧ: 02 ರಲ್ಲಿ** ತೋರಿಸಿದೆ.

4) ಆಯವ್ಯಯ:-

ಬಜೆಟ್/2016-17/1040/03-01-2017 ರ ಪ್ರಕಾರ ಸರ್ಕಾರಕ್ಕೆ 2017-18ನೇ ಸಾಲಿನ ಬಜೆಟ್ ಸಲ್ಲಿಸಿದ್ದು ಗಮನಿಸಲಾಗಿದೆ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ: ಆಇಂ /9/ಬಿಪಿಇ/2016 ದಿನಾಂಕ: 15-12-2016 ರಂತೆ 2017-18ನೇ ಸಾಲಿಗೆ ವೆಚ್ಚ ಅಂದಾಜುಗಳ ತಯಾರಿಕೆಯ ಬಗ್ಗೆ ಮಾರ್ಗಸೂಚಿ/ಸೂಚನೆಗಳ ಪ್ರಕಾರ ಹಾಗೂ ನಿಗದಿಪಡಿಸಿದ ನಮೂನೆಗಳಲ್ಲಿ (ಅನುಬಂಧ) ಅಂದಾಜು ತಯಾರಿಸಬೇಕಾಗಿತ್ತು. ಆದರೆ ಸದರಿ ಸರ್ಕಾರದ ಸುತ್ತೋಲೆಯಲ್ಲಿರುವ ಅಂಶಗಳು ಪಾಲನೆಯಾಗದಿರುವುದಕ್ಕೆ ಸೂಕ್ತ ಸ್ಪಷ್ಟೀಕರಣ ನೀಡಲು ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂ.15 ದಿನಾಂಕ:15-12-2018 ರಂದು ನೀಡಲಾಗಿತ್ತು ಆದರೆ ಸಂಸ್ಥೆಯವರು ಯಾವುದೇ ಉತ್ತರ ನೀಡಿರುವುದಿಲ್ಲ.

ಅ.ನಂ	ವಿವರ	ರೂ.ಲಕ್ಷಗಳಲ್ಲಿ
1)	2017-18 ನೇ ಸಾಲಿನ ಬಜೆಟನ್ನು ಸರ್ಕಾರಕ್ಕೆ ಸಲ್ಲಿಸಿದ್ದು,	36380.24
2)	2017-18 ನೇ ಸಾಲಿನ ವಾಸ್ತವವಾಗಿ ಸರ್ಕಾರದಿಂದ ಹಂಚಿಕೆಯಾದ ಅನುದಾನ	6317.60
3)	2017-18 ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ	6058.30

5) **ವಾರ್ಷಿಕ ಲೆಕ್ಕಪತ್ರ ಕುರಿತು :-**

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕಾಡಾ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಬೆಳಗಾವಿಯ 2017-18ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಬಗ್ಗೆ ಪತ್ರಗಳ ಬಗ್ಗೆ ಪತ್ರ ಸಂಖ್ಯೆ: ಕ್ರ.ಸಂ.ಮಫ/ಯೋ/ಕಾಡಾಬೆ/ಮಲೆಅ/ಲೆಕ್ಕ 4/ವಾಲೆಪ/2018-19/506 ದಿನಾಂಮಕ: 26-09-2018 ರ ಪ್ರಕಾರ ಸರ್ಕಾರಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಲಾಗಿದೆ. 2017-18ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿನ ನ್ಯೂನ್ಯತೆಗಳು ಈ ಕೆಳಕಾಣಿಸಿದಂತಿದೆ.

1) ಕಾಡಾ ನಿಯಮಗಳು 1980 ನಿಯಮ 11 ನಮೂನೆ:VI ವಾರ್ಷಿಕ ಲೆಕ್ಕ ಪತ್ರಗಳನ್ನು ತಯಾರಿಸಿ ಎಪ್ರೀಲ್‌ರೋಳಗಾಗಿ ಪ್ರತಿ ವರ್ಷ 5 ಸೆಟ್‌ಗಳಲ್ಲಿ ಸರ್ಕಾರದ ಕಾರ್ಯದರ್ಶಿಗಳು ಯೋಜನೆ ಇಲಾಖೆ ಇವರಿಗೆ ಸಲ್ಲಿಸಲು ನಿಯಮಗಳಲ್ಲಿ ನಿರ್ದೇಶನವಿರುತ್ತದೆ. ಆದರೆ ಸದರಿ ವಾರ್ಷಿಕ ಲೆಕ್ಕಪತ್ರಗಳನ್ನು ದಿನಾಂಕ:26-09-2018 ರಂದು ಸಲ್ಲಿಸಲಾಗಿರುತ್ತದೆ. ಇದು 4 ತಿಂಗಳು ಮೇಲ್ಪಟ್ಟು ವಿಳಂಬವಾಗಿ ಸಲ್ಲಿಸಲಾಗಿರುತ್ತದೆ. ವಿಳಂಬಕ್ಕೆ ಕಾರಣಗಳನ್ನು ನೀಡುವುದು.

2) ನಗದು ಪುಸ್ತಕ ಪ್ರಕಾರ ವಿಶೇಷ ಅಭಿವೃದ್ಧಿ ಯೋಜನೆ ಮತ್ತು ನಮ್ಮ ಹೊಲ ನಮ್ಮ ರಸ್ತೆ ಯೋಜನೆಗಳ ಜಮೆ, ಖರ್ಚು, ಶಿಲ್ಕುಗಳ ಆರ್ಥಿಕ ಪರಿಸ್ಥಿತಿಯ ವಿವರ ವಾರ್ಷಿಕ ಲೆಕ್ಕಪತ್ರಗಳಲ್ಲಿ ದಾಖಲಿಸದಿರುವುದಕ್ಕೆ ವಿವರಣೆಯನ್ನು ಲೆಕ್ಕಪರಿಶೋಧನೆಗೆ ನೀಡುವುದು.

3) ಕಾಡಾ ಅಧಿನಿಯಮ: 1980 ಅಧ್ಯಾಯ: 8 ಕಲಂ: 24ರಲ್ಲಿ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿ ಅದರಲ್ಲಿ ಕಾಡಾ ಪ್ರಾಧಿಕಾರ Balance Sheetನ್ನು ತಯಾರಿಸಲು ತಿಳಿಸಲಾಗಿದ್ದು. ಆದರೆ ಪ್ರಾಧಿಕಾರದಲ್ಲಿ 2017-18ನೇ ಸಾಲಿನ Balance Sheetನ್ನು ತಯಾರಿಸಲಾಗಿಲ್ಲ. ಇದರಿಂದಾಗಿ ಪ್ರಾಧಿಕಾರದ ಒಟ್ಟಾರೆ ಆಸ್ತಿ ಮತ್ತು ಹೊಣೆ ಇರುವ ಬಗ್ಗೆ ಸ್ಪಷ್ಟವಾಗಿರುವುದಿಲ್ಲ. ಆದ್ದರಿಂದ ಈ ಮೇಲಿನ ಅಂಶಗಳಿಗೆ ಸೂಕ್ತ ದಾಖಲೆಗಳೊಂದಿಗೆ ಅನುಸರಣೆ ನೀಡಲು ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂ.16 ದಿನಾಂಕ:15-12-2018 ರಂದು ನೀಡಲಾಗಿತ್ತು ಆದರೆ ಯಾವುದೇ ಉತ್ತರ ನೀಡಿರುವುದಿಲ್ಲ. ವಿವರವನ್ನು **ಅನುಬಂಧ: 3, 4 ಮತ್ತು 5ರಲ್ಲಿ** ಲಗತ್ತಿಸಿದೆ.

6) ಅಂಚೆ ಚೀಟಿ ಕುರಿತು :

ಕೇಂದ್ರ ಕಚೇರಿ ಹಾಗೂ ವಿಭಾಗ ಮತ್ತು ಉಪ ವಿಭಾಗ ಕಚೇರಿಗಳಲ್ಲಿ ಅಂಚೆ ಚೀಟಿ ಹಾಗೂ ವಿಲೇವಾರಿ ಮಾಡಿದ ವಿವರಗಳು ಈ ಕೆಳಕಾಣಿಸಿದಂತಿದೆ.

ಅ. ಸಂ	ಕಚೇರಿಗಳ ಹೆಸರು	1-4-2017ಕ್ಕೆ ಪ್ರಾರಂಭದ ಶಿಲ್ಕು	2017-18 ರಲ್ಲಿ ಸ್ವೀಕೃತಿ	ಒಟ್ಟು	2017-18ರಲ್ಲಿ ಉಪಯೋಗ	31-03-2018 ಕ್ಕೆ ಅಂತಿಮ ಶಿಲ್ಕು
I	ಕೇಂದ್ರ ಕಾಡಾ ಕಚೇರಿ ಬೆಳಗಾವಿ	8940	20000	28940	23847	5093
1	ಕಾ.ನಿ.ಅ. ವಿಭಾಗ-1 ನರಗುಂದ	567	3000	3567	2195	372
2	ಸ.ಕಾ.ಅ ಉಪ ವಿಭಾಗ-1 ನರಗುಂದ	375	500	875	290	585
4	ಸ.ಕೃ.ನಿ(ಕೃಸ) ಉಪವಿಭಾಗ-1 ಧಾರವಾಡ	242	1000	1242	805	437
5	ಸಕಾಅ ಉಪವಿಭಾಗ ರಾಮದುರ್ಗ	30	-	30	-	30
6	ಸಕಾಅ ಮಫಯೋ ಕಾಡಾ ಉಪವಿಭಾಗ ನಂ-3 ಹಾರೂಗೇರಿ	995	1000	1995	1805	190
7	ಸಕಾನಿಅ ಕಾಡಾ ಇ ಉಪವಿಭಾಗ-4 ಜಮಖಂಡಿ	115	-	115	65	50
8	ಕಾ.ನಿ.ಇ.ಕಾಡಾ ಮ&ಫ ನಂ-3 ಚಿಕ್ಕೋಡಿ	3000	-	3000	380	2620
9	ಸ.ಕಾ.ಅ ಉಪ ವಿಭಾಗ-2 ಅಥಣಿ	170	-	170	100	70

ಮೇಲ್ಕಾಣಿಸಿದ ವಿಭಾಗ ಉಪವಿಭಾಗಗಳ ಲೆಕ್ಕಪರಿಶೋಧನೆ ಪ್ರಾರಂಭ ದಿನಾಂಕ:28.11.2018 ರ ವರೆಗೆ ಭೌತಿಕ ಪರಿಶೀಲನೆಗೆ ಅಂಚೆ ಚೀಟಿ ರಜಿಸ್ಟರನ್ನು ನಿರ್ವಹಿಸಿರುವುದಿಲ್ಲ.

7) <u>ಅನುದಾನ:-</u>

ಮಲಪ್ರಭಾ ಮತ್ತು ಘಟಪ್ರಭಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ ಸಂಸ್ಥೆಗೆ 2017-18 ನೇ ಸಾಲಿನಲ್ಲಿ ಜಮೆ ಬಂದಿರುವ ಅನುದಾನಗಳ ವಹಿಯನ್ನು ನಿರ್ವಹಿಸಲಾಗಿದೆ. ವಿವರ ಕೆಳಗಿನಂತಿದೆ. **ರೂಗಳು ಲಕ್ಷಗಳಲ್ಲಿ.**

ಅ.ನಂ	ಲೆಕ್ಕ ಶಿರ್ಷಿಕೆ	ಹಂಚಿಕೆಯಾದ ಅನುದಾನ	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ವೆಚ್ಚ	ಉಳಿತಾಯ
1	ಆಡಳಿತ	607.00	465.22	464.41	0.81
2	ಕಾಡಾ ಕಾಮಗಾರಿ	1900.00	1900.00	1900.00	-
3	ನಬಾರ್ಡ್	1700.00	1700.00	1700.00	-
4	ವಿಶೇಷ ಅಭಿವೃದ್ಧಿ ಯೋಜನೆ	1976.00	1858.48	1833.28	25.20
5	SCP	96.00	96.00	37.90	58.10
6	TSP	38.60	38.60	19.78	18.82
	Total	**6317.60**	**6058.30**	**5955.37**	**102.93**

2015–16 ನೇ ಸಾಲಿನಲ್ಲಿ ಬಾಕಿ ಉಳಿದಿರುವ ಅನುದಾನ SCP ಹಾಗೂ TSP ಅನುದಾನಗಳನ್ನು ಕರ್ನಾಟಕ ಸರ್ಕಾರ ಅಧಿನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಕಾಡಾ ಬೆಂಗಳೂರು ಇವರ ಪತ್ರ ಸಂಖ್ಯೆ :ಜಸಂಇ/105/ಸಿಎಎಂ/2015 ದಿನಾಂಕ:05.07.2016 ರಲ್ಲಿ ನಿರ್ದೇಶನದಂತೆ ವಿಶೇಷ ಅಭಿವೃದ್ಧಿ ಯೋಜನೆಯ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಗೆ 2015–16 ರಲ್ಲಿ ಶಿಲ್ಕು ಉಳಿದಿರುವ ಅನುದಾನವನ್ನು 2016–17 ನೇ ಸಾಲಿನ ಬಳಸಿಕೊಳ್ಳಲು ಆರ್ಥಿಕ ಇಲಾಖೆಯ ಸಹಮತಿ ಅನ್ವಯ ಅನುಮೋದನೆಯನ್ನು ಪಡೆದುಕೊಂಡು ಕರ್ನಾಟಕ ಸರ್ಕಾರ ಅಧಿನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಕಾಡಾ ಬೆಂಗಳೂರು ನಿರ್ದೇಶನ ಮೇರೆಗೆ ಕೆಳಗಿನಂತೆ ಉಪಯೋಗಿಸಿಕೊಳ್ಳಲಾಗಿದೆ. **ರೂಗಳು ಲಕ್ಷಗಳಲ್ಲಿ.**

ಅ.ನಂ	ಲೆಕ್ಕ ಶಿರ್ಷಿಕೆ	ಬಜೆಟ್	ಸರ್ಕಾರದಿಂದ ಬಿಡುಗಡೆಯಾದ ಅನುದಾನ	ವೆಚ್ಚ	ಉಳಿತಾಯ
1	SCP	–	37.93	30.57	7.36
2	TSP	–	5.38	3.12	2.26
	Total	–	**43.31**	**33.69**	**9.62**

8) <u>ಅನುದಾನ ಅಧ್ಯರ್ಪಣೆ ಕುರಿತು</u>.

ಮಲಪ್ರಭಾ ಮತ್ತು ಘಟಪ್ರಭಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ ಸಂಸ್ಥೆಗೆ 2017–18 ನೇ ಸಾಲಿನಲ್ಲಿ ಜಮೆ ಬಂದಿರುವ ಅನುದಾನಗಳನ್ನು ಮಾರ್ಚ್–2018 ರ ವರೆಗೆ ಉಪಯೋಗಿಸಿಕೊಂಡು ಶಿಲ್ಕು ಉಳಿದಿರುವ ಅನುದಾನವನ್ನು ಸದರಿ ಕಚೇರಿ ಪತ್ರ ಸಂಖ್ಯೆ:ಮಘಯೋ/ಕಾಡಾ/ಮುಲೆಅ/ಲೆಕ್ಕ–4/ಅನುದಾನ ಅಧ್ಯರ್ಪಣೆ/2018–19/111 ದಿನಾಂಕ:08.05.2018 ರ ಮೂಲಕ ಅಧಿನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಕಾಡಾ ಬೆಂಗಳೂರು ಇವರಿಗೆ ಹಿಂದುರಿಗಿಸಲಾಗಿದೆ. ವಿವರ ಇಂತಿದೆ. **ರೂಗಳು ಲಕ್ಷಗಳಲ್ಲಿ.**

ಅ.ನಂ	ಲೆಕ್ಕ ಶಿರ್ಷಿಕೆ	ಹಂಚಿಕೆಯಾದ ಅನುದಾನ	ಸರ್ಕಾರದಿಂದ ಬಿಡುಗಡೆಯಾದ	ವೆಚ್ಚ	ಉಳಿತಾಯ	ಸರ್ಕಾರಕ್ಕೆ ಅನುದಾನ
1	ಆಡಳಿತ	607.00	465.22	464.41	0.81	0.81 ದಿ:08.05.2018
2	ಕಾಡಾ ಕಾಮಗಾರಿ	1900.00	1900.00	1900.00	-	–
3	ನಬಾರ್ಡ್	1700.00	1700.00	1700.00	-	–
4	ವಿಶೇಷ ಅಭಿವೃದ್ಧಿ ಯೋಜನೆ	1976.00	1858.48	1833.28	25.20	25.20 ದಿ:08.05.2018
5	SCP	96.00	96.00	37.90	58.10	–
6	TSP	38.60	38.60	19.78	18.82	–
7	SCP (2015-16 ಸಾಲಿನ ಶಿಲ್ಕು ಉಳಿದಿರುವ ಅನುದಾನ)	-	37.93	30.57	7.36	–
8	TSP (2015-16 ಸಾಲಿನ ಶಿಲ್ಕು ಉಳಿದಿರುವ ಅನುದಾನ)	-	5.38	3.12	2.26	–
	Total	**6717.60**	**6101.61**	**5989.06**	**112.55**	**26.01**

ವಿಶೇಷ ಅಭಿವೃದ್ಧಿ ಯೋಜನೆಯ ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆಯ ಅನುದಾನಗಳು 2017–18 ನೇ ಸಾಲಿನಲ್ಲಿ SCP ರೂ.58.10 ಲಕ್ಷಗಳು ಹಾಗೂ TSP ರೂ.18.82 ಲಕ್ಷಗಳು ಹಾಗೂ 2015–16 ನೇ ಸಾಲಿನ ಅಂತ್ಯಕ್ಕೆ ಶಿಲ್ಕು ಇರುವ ಅನುದಾನವನ್ನು ಬಳಸಿಕೊಂಡು 2017–18 ನೇ ಸಾಲಿನ ಅಂತ್ಯಕ್ಕೆ SCP ರೂ.7.36 ಲಕ್ಷಗಳು ಹಾಗೂ TSP ರೂ.2.26 ಲಕ್ಷಗಳು ಶಿಲ್ಕು ಇರುವುದು.

9) ರಸೀದಿ ಪುಸ್ತಕಗಳ ದಾಸ್ತಾನುಗಳ ಬಗ್ಗೆ :

ಸನ್.2017–18ನೇ ಸಾಲಿನಲ್ಲಿ ರಸೀದಿ ಪುಸ್ತಕಗಳ ದಾಸ್ತಾನು ರಜಿಸ್ಟರನ್ನು ನಿರ್ವಹಿಸಲಾಗಿದ್ದು, ಸದರಿ ರಜಿಸ್ಟರನ್ನು ಪರಿಶೀಲಿಸಿರುವ ಪ್ರಕಾರ ಸ್ವೀಕೃತಿ ಹಾಗೂ ಉಪಯೋಗಕ್ಕೆ ನೀಡಿರುವ ವಿವರ ಕೆಳಗಿನಂತಿದೆ.

ಅನಂ	ಸಂಕ್ಷೀಪ್ತ ವಿವರ	ಕ.ಆ.ಸಂ ಪ್ರಪತ್ರದ ರಸೀದಿ ಪುಸ್ತಕಗಳು	ವಿಶೇಷ ಸಾಲ ವಸೂಲಾತಿ ರಸೀದಿ ಪುಸ್ತಕಗಳು	ಅಳತೆ ಪುಸ್ತಕಗಳು
1	01–04–2017ಕ್ಕೆ ಪ್ರಾರಂಭಿಕ ಶಿಲ್ಕು	04	06	ದಾಸ್ತಾನು ಇರುವುದಿಲ್ಲ.
2	2017–18ರಲ್ಲಿ ಸ್ವೀಕೃತಿ	–	–	–
3	ಒಟ್ಟು (1+2)	04	06	–
4	01–4–2017 ರಿಂದ 31–03–2018 ರ ವರೆಗೆ ಉಪಯೋಗ	01	–	–
5	31–03–2018 ಕ್ಕೆ ಅಂತಿಮ ಶಿಲ್ಕು	03	06	–
6	01–04–2017 ರಿಂದ 28–11–2018 ರ ವರೆಗೆ	–	–	–
7	ಒಟ್ಟು	03	06	–
8	01–04–2018 ರಿಂದ 28–11–2018 ರ ವರಗೆ ಉಪಯೋಗ	01	–	–
9	2017–18 ನೇ ಸಾಲಿನ ಲೆಕ್ಕಪರಿಶೋಧನಾ ಪ್ರಾರಂಭದ ದಿನಾಂಕ: 28–11–2018ರಂದು ಶಿಲ್ಕು	02	06	–

ವಿಶೇಷ ಸಾಲ ವಸೂಲಾತಿ ಚಲನ ಮೂಲಕ ಸ್ವೀಕರಿಸಲಾಗುತ್ತಿದ್ದು, ಆದ್ದರಿಂದ ದಿನಾಂಕ:2–11–2012 ರಿಂದ ರಸೀದಿ ಪುಸ್ತಕವನ್ನು ಉಪಯೋಗಿಸುತ್ತಿಲ್ಲ.

10) ಮುಂಗಡ :–

ಮುಂಗಡ ವ್ಯವಹಾರಗಳ ಬಗ್ಗೆ ವಹಿಯನ್ನು ನಿರ್ವಹಿಸಿರುವರು. ಪ್ರಸಕ್ತ ಸಾಲಿನಲ್ಲಿ ಕಾಡಾ ಕಚೇರಿ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ನೀಡಿರುವ ಮುಂಗಡ ಹಾಗೂ ಹೊಂದಾಣಿಕೆಯ ವಿವರಗಳು ಕೆಳಗಿನಂತಿದೆ.

ಕ್ರ.ಸಂ	ವಿವರ	ಹಬ್ಬದ ಮುಂಗಡ	ಪ್ರವಾಸ ಮುಂಗಡ	ಕಂಪ್ಯೂಟರ್ ಮುಂಗಡ	ಮೋಟಾರ್ ಸೈಕಲ್ ಮುಂಗಡ	ಒಟ್ಟು
1)	01.04.2017 ಪ್ರಾರಂಭಿಕ ಶಿಲ್ಕು	–	–	33000	24720	57720
2)	2017–18 ರಲ್ಲಿ ಮುಂಗಡ ನೀಡಿದ್ದು	–	6000	–	–	6000
3)	ಒಟ್ಟು	–	6000	33000	24720	63720
4)	2017–18 ರಲ್ಲಿ ಹೊಂದಾಣಿಕೆ	–	6000	17000	4167	27167
5)	ದಿ:31.03.2018 ರ ಅಂತಿಮ ಶಿಲ್ಕು	–	–	16000	20553	36553

ಶಿಲ್ಕು ಉಳಿದಿರುವ ಕಂಪ್ಯೂಟರ ಮುಂಗಡ ರೂ.16000/– ಹಾಗೂ ಮೋಟಾರ್ ಸೈಕಲ್ ಮುಂಗಡ ರೂ.20,553/– ಗಳನ್ನು ನಿಗದಿ ಪಡಿಸಲಾಗಿರುವ ಕಂತುಗಳ ಮೊತ್ತವನ್ನು ಪ್ರತಿ ತಿಂಗಳ ವೇತನ ಬಿಲ್ಲದಲ್ಲಿ ಕಟಾಯಿಸಿ ನಿಗದಿತ ಪ್ರಮಾಣದಲ್ಲಿ ವಸೂಲಾತಿಗೆ ಕ್ರಮವಹಿಸಲು ಸೂಚಿಸಲಾಗಿದೆ.

11) ಹೂಡಿಕೆ:

ಪ್ರಸಕ್ತ ಸಾಲಿನಲ್ಲಿ ಹಾಗೂ ಹಿಂದಿನ ಸಾಲುಗಳಲ್ಲಿ ಗುತ್ತಿಗೆದಾರರಿಂದ ಭದ್ರತಾ ಠೇವುಗಳ ಮತ್ತು ಇ.ಎಮ್.ಡಿ ಗಳ ಮೊತ್ತಗಳನ್ನು ಬ್ಯಾಂಕ್‌ನಲ್ಲಿ ಹಾಗೂ ಖಜಾನೆ ಶಿಲ್ಕಿನ ಮೊತ್ತವನ್ನು ಹೂಡಿಕೆ ರೂಪದಲ್ಲಿ ತೋಡಗಿಸಲಾಗಿದೆ. ಹೂಡಿಕೆ ವಿವರ ಕೆಳಗಿನಂತಿದೆ.

ಕ್ರ.ಸಂ	ವಿವರ	ಹೂಡಿಕೆಗಳ ವಿವರ
1	ದಿನಾಂಕ:01.04.2017 ರ ಪ್ರಾರಂಭಿಕ ಶಿಲ್ಕು	ರೂ.55,94,814/–
2	2017–18 ರಲ್ಲಿ ಹೂಡಿಕೆ	ಇಲ್ಲ
3	ಒಟ್ಟು	ರೂ.55,94,814/–
4	2017–18 ರಲ್ಲಿ ಹೂಡಿಕೆ ನಗದೀಕರಣ	ರೂ.3,38,300/–
5	ದಿನಾಂಕ:31.03.2018 ರ ಅಂತಿಮ ಶಿಲ್ಕು	ರೂ.52,56,514/–

ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 278 ರ ಪ್ರಕಾರ ಕ್ರಮ ಕೈಕೊಂಡಿರುವುದಿಲ್ಲ. 3 ವರ್ಷಗಳಿಗಿಂತ ಹೆಚ್ಚಿನ ಅವಧಿಯ ಇ.ಎಮ್.ಡಿ ಹಾಗೂ ಭದ್ರತಾ ಠೇವುಗಳನ್ನು ಮುಟ್ಟುಗೋಲು ಹಾಕಿ ಸರ್ಕಾರಕ್ಕೆ ಭರಣಾ ಮಾಡಲು ಸೂಚಿಸಲಾಗಿದೆ. ವಿವರಗಳನ್ನು **ಅನುಬಂಧ ನಂ –6** ರಲ್ಲಿ ನೀಡಲಾಗಿದೆ.

12) ಹೂಡಿಕೆಯ ವ್ಯತ್ಯಾಸದ ಬಗ್ಗೆ:-

1) ದಿ:31.03.2018 ಕ್ಕೆ ನಗದು ಪುಸ್ತಕ ಪ್ರಕಾರ ಹೂಡಿಕೆ ಶಿಲ್ಕು ರೂ.47,99,186/-

2) ದಿ:31.03.2018 ಕ್ಕೆ ಖಜಾನೆ ನಗದು ಪುಸ್ತಕ ಪ್ರಕಾರ ಹೂಡಿಕೆ ಶಿಲ್ಕು ರೂ.10,00,000/-

3) ಒಟ್ಟು ರೂ.57,99,186/-

4) ದಿ:31.03.2018 ಕ್ಕೆ ಹೂಡಿಕೆ ರಜಿಸ್ಟರ ಪ್ರಕಾರ ಶಿಲ್ಕು ರೂ.52,56,514/-

5) ವ್ಯತ್ಯಾಸ **ರೂ5,42,672/-**

ಈ ಮೇಲ್ಕಾಣಿಸಿದ ಹೂಡಿಕೆ ರಜಿಸ್ಟರದಲ್ಲಿ ದಾಖಲಿಸದೇ ಇರುವ ವ್ಯತ್ಯಾಸದ ಮೊತ್ತ ರೂ.5,42,672/- ಗಳಿಗೆ ಸೂಕ್ತ ವಿವರಣೆ ನೀಡುವಂತೆ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:14 ದಿನಾಂಕ:15.12.2018 ರಂದು ವಿಚಾರಿಸಲಾಗಿ ಸದರಿ ವಿಚಾರಣಾ ಪತ್ರಕ್ಕೆ ಸಂಸ್ಥೆಯವರು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ ಲೆಕ್ಕಪರಿಶೋಧನೆಗೆ ಸೂಕ್ತ ಅನುಸರಣೆ ಸಲ್ಲಿಸಲು ಸೂಚಿಸಿದೆ.

13) ಠೇವು ಮತ್ತು ಇ.ಎಮ್.ಡಿ ಗಳ ಬಗ್ಗೆ :-

ಪ್ರಸಕ್ತ ಸಾಲಿನ ಠೇವು ಮತ್ತು ಇ.ಎಮ್.ಡಿ ಗಳ ವ್ಯವಹಾರದ ಬಗ್ಗೆ ವಹಿಗಳನ್ನು ಪಿ.ಡಬ್ಲೂ.ಡಿ ನಮೂನೆ ನಂಬರ 67 ರಲ್ಲಿ ನಿರ್ವಹಿಸಲಾಗಿದೆ. ಸದರಿ ವಹಿಗಳನ್ನು ಪರಿಶೀಲಿಸಲಾಗಿ ಪ್ರಸಕ್ತ ಸಾಲಿನಲ್ಲಿ ಠೇವು ಮತ್ತು ಇ.ಎಮ್.ಡಿ ಗಳ ವ್ಯವಹಾರವು ಕೆಳಗಿನಂತೆ ವಿವರಿಸಲಾಗಿದೆ.

ಅ.ನಂ	ವಿವರ	ಕಾಡಾ ಕಾಮಗಾರಿ ಭದ್ರತಾ ಠೇವಣಿ	ನಮ್ಮ ಹೊಲ ನಮ್ಮ ರಸ್ತೆ ಭದ್ರತಾ ಠೇವಣಿ	ಹೊಲಗಾಲುವೆ ಭದ್ರತಾ ಠೇವಣಿ F.I.C	ವಸತಿ ಗೃಹ ಭದ್ರತಾ ಠೇವು	ಕಾಮಗಾರಿಗಳ ಹೆಚ್ಚುವರಿ ಭದ್ರತಾ ಠೇವಣಿ (A.P.S)	ವಿಶೇಷ ಅಭಿವೃದ್ಧಿ ಯೋಜನೆ ಭದ್ರತಾ ಠೇವಣಿ	ನಬಾರ್ಡ್ ಕಾಮಗಾರಿ ಸವಳು ಜವಳು	ನಬಾರ್ಡ್ ರಸ್ತೆ ಕಾಮಗಾರಿ	ಒಟ್ಟು
1	2	3	4	5	6	7	8	9	10	11
1	01/01/2017 ರ ಪ್ರಾರಂಭ ಶಿಲ್ಕು	10240860.00	856516.00	11458793.00	23300.00	6044890.00	13701322.00	1143921.00	26151296.00	69620898.00
2	2017-18 ರಲ್ಲಿ ಸ್ವೀಕೃತಿ	9639854.00	0.00	0.00	500.00	5667498.00	6031339.00	0.00	11085556.00	32424747.00
3	ಒಟ್ಟು	19880714.00	856516.00	11458793.00	23800.00	11712388.00	19732661.00	1143921.00	37236852.00	102045645.00
4	2017-18 ರಲ್ಲಿ ಮರುಪಾವತಿಸಿರುವ ಮೊತ್ತ	2942113.00	0.00	371749.00	0.00	7625714.00	6665415.00	609982.00	18365820.00	36580793.00
5	31.03.2017 ಕ್ಕೆ ಅಂತಿಮ ಶಿಲ್ಕು	16938601.00	856516.00	11087044.00	23800.00	4086674.00	13067246.00	533939.00	18871032.00	65464852.00

ಸದರಿ ಠೇವು ಮತ್ತು ಇ.ಎಮ್.ಡಿ ಗಳ ಯೋಜನೆವಾರು ವಹಿಗಳನ್ನು ಪರಿಶೀಲಿಸಲಾಗಿ ಸುಮಾರು ವರ್ಷಗಳಿಂದ ಠೇವು ಮತ್ತು ಇ.ಎಮ್.ಡಿ ಗಳು ಮುಂದುವರೆಯುತ್ತಿದ್ದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುವುದು. ಆದ್ದರಿಂದ ಕರ್ನಾಟಕ ಆರ್ಥಿಕ ಸಂಹಿತೆ 1958 ರ ಅನುಚ್ಛೇದ 278 ರನ್ವಯ ಹಾಗೂ ಸಾರ್ವಜನಿಕ ಕಾಮಗಾರಿಗಳ ಇಲಾಖಾ ಸಂಹಿತೆ (Karnataka Public Works Account Code Vol: I) ಪ್ಯಾರಾಗ್ರಾಫ್ 399 ಮತ್ತು 400 ರ ಪ್ರಕಾರ 3 ವರ್ಷ ಅವಧಿ ಮುಕ್ತಾಯಗೊಂಡಿರುವ ಭದ್ರತಾ ಠೇವಣಿ ಮೊತ್ತ 1,41,16,232/–ಗಳನ್ನು ಸರಕಾರದ ಲೆಕ್ಕ ಶೀರ್ಷಿಕೆ ಭರಣಾ ಮಾಡಲು ಸೂಚಿಸಲಾಗಿದೆ. ಸದರಿ ಮೊತ್ತ ಭರಣಾ ಮಾಡುವವರೆಗೆ ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು **ಅನುಬಂಧ: 7ರಲ್ಲಿ** ಲಗತ್ತಿಸಿದೆ.

14) ಕಾರ್ಯನಿರ್ವಾಹಕ ಅಭಿಯಂತರರು ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ವಿಭಾಗ ನರಗುಂದ ಆರ್ಥಿಕ ಪರಿಸ್ಥಿತಿ

ಅನಂ	ವಿವರ	ಮೊತ್ತ
1	ದಿನಾಂಕ:01.04.2017 ರ ಪ್ರಾರಂಭಿಕ ಶಿಲ್ಕು	7,57,610.25
2	2017–18 ರಲ್ಲಿ ಜಮೆ	1,74,88,138.00
3	ಒಟ್ಟು	1,82,45,748.25
4	2017–18 ರಲ್ಲಿ ವೆಚ್ಚ	1,45,26,856.00
5	ದಿನಾಂಕ:31.03.2018 ರ ಅಂತಿಮ ಶಿಲ್ಕು	35,18,892.25
6	ದಿನಾಂಕ:31.03.2018 ರ ಭಾರತಿಯ ಸ್ಟೇಟ್ ಬ್ಯಾಂಕ್ ಶಾಖಾ ನರಗುಂದ ಉಳಿತಾಯ ಖಾತೆ ಸಂಖ್ಯೆ:33980214999 ರಲ್ಲಿ ಶಿಲ್ಕು	38,68,904.25
7	ವ್ಯತ್ಯಾಸ	1,50,012.00

ವ್ಯತ್ಯಾಸದ ವಿವರ

ನಗದಿಕರಣಗೊಳ್ಳದ ಧನಾದೇಶಗಳು

ಕ್ರ.ಸಂ	**ಧನಾದೇಶ ಸಂಖ್ಯೆ**	**ದಿನಾಂಕ**	**ಮೊತ್ತ**
1	499966	26.03.2018	1,000.00
2	499967	26.03.2018	1,050.00
3	499968	31.03.2018	24,800.00
4	499969	31.03.2018	1,23,162.00
		ಒಟ್ಟು	1,50,012.00

ಧನಾದೇಶ ಸಂಖ್ಯೆ:499969 ದಿನಾಂಕ:31.03.2018 ರಂದು ರೂ.1,23,162/- ಗಳನ್ನು ಆಡಳಿತಾಧಿಕಾರಿಗಳು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಬೆಳಗಾವಿ ಕಾರ್ಯಾಲಯಕ್ಕೆ ಹಿಂದಿರುಗಿಸಿರುವರು.

ಅಳತೆ ಪುಸ್ತಕ ದಾಸ್ತಾನು ವಹಿ ಬಗ್ಗೆ

ಪ್ರಸಕ್ತ ಸಾಲಿನ ಅಳತೆ ಪುಸ್ತಕಗಳ ದಾಸ್ತಾನು ಲೆಕ್ಕವನ್ನು ಪರಿಶೀಲಿಸಲಾಗಿದೆ. ವಿವರವು ಕೆಳಗಿನಂತಿದೆ.

ಕ್ರ.ಸಂ	ವಿವರ	ಮೊತ್ತ
1)	ದಿನಾಂಕ:01.04.2017 ರ ಪ್ರಾರಂಭಿಕ ಶಿಲ್ಕು	50
2)	2017-18 ನೇ ಸಾಲಿನಲ್ಲಿ ಖರೀದಿ	30
3)	ಒಟ್ಟು	80
4)	2017-18 ನೇ ಸಾಲಿನಲ್ಲಿ ಉಪಯೋಗ	42
5)	ದಿನಾಂಕ:31.03.2018 ರ ಅಂತಿಮ ಶಿಲ್ಕು	38
6)	2018-19 ನೇ ಸಾಲಿನಲ್ಲಿ ಖರೀದಿ	ಇಲ್ಲ
7)	ಒಟ್ಟು	38
8)	2018-19 ನೇ ಸಾಲಿನಲ್ಲಿ ಉಪಯೋಗ	3
9)	ದಿನಾಂಕ:29.09.2018 ರಂದು ಶಿಲ್ಕು	35

15) ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಕಾಡಾ ಉಪ ವಿಭಾಗ ನಂ.1 ನರಗುಂದ

ಆರ್ಥಿಕ ಪರಿಸ್ಥಿತಿ

ಅನಂ	ವಿವರ	ಮೊತ್ತ
1	ದಿನಾಂಕ:01.04.2017 ರ ಪ್ರಾರಂಭಿಕ ಶಿಲ್ಕು	6000
2	2017-18 ರಲ್ಲಿ ಜಮೆ	18,13,917
3	ಒಟ್ಟು	18,19,917.
4	2017-18 ರಲ್ಲಿ ವೆಚ್ಚ	18,14,917.
5	ದಿನಾಂಕ:31.03.2018 ರ ಅಂತಿಮ ಶಿಲ್ಕು	5000.00
6	ದಿನಾಂಕ:31.03.2018 ರ ಭಾರತಿಯ ಸ್ಟೇಟ್ ಬ್ಯಾಂಕ್ ಶಾಖಾ ನರಗುಂದ ಉಳಿತಾಯ ಖಾತೆ ಸಂಖ್ಯೆ:34753367551 ರಲ್ಲಿ ಶಿಲ್ಕು	17,212.00
7	ವ್ಯತ್ಯಾಸ	12,212.00

ವ್ಯತ್ಯಾಸದ ವಿವರ

ನಗದಿಕರಣಗೊಳ್ಳದ ಧನಾದೇಶಗಳು

ಕ್ರಸಂ	ಧನಾದೇಶ ಸಂಖ್ಯೆ	ದಿನಾಂಕ	ಮೊತ್ತ
1	216564	31.03.2018	12,212/–
		ಒಟ್ಟು	12,212/–

ಧನಾದೇಶ ಸಂಖ್ಯೆ: 216564 ದಿನಾಂಕ:31.03.2018 ರಂದು ರೂ. 12,212/–ಗಳನ್ನು ಆಡಳಿತಾಧಿಕಾರಿಗಳು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಬೆಳಗಾವಿ ಕಾರ್ಯಾಲಯಕ್ಕೆ ಹಿಂದಿರುಗಿಸಿರುವರು.

16)ಸಹಾಯಕ ಕೃಷಿ ನಿರ್ದೇಶಕರು ಕಾಡಾ (ಕೃಷಿ ಮತ್ತು ಸಹಕಾರ) ಉಪ ವಿಭಾಗ ನಂ.2 ಜಮಖಂಡಿ

ಆರ್ಥಿಕ ಪರಿಸ್ಥಿತಿ

ಅನಂ	ವಿವರ	ಮೊತ್ತ
1	ದಿನಾಂಕ:01.04.2017 ರ ಪ್ರಾರಂಭಿಕ ಶಿಲ್ಕು	1665
2	2017–18 ರಲ್ಲಿ ಜಮೆ	476800
3	ಒಟ್ಟು	4769665
4	2017–18 ರಲ್ಲಿ ವೆಚ್ಚ	4768910
5	ದಿನಾಂಕ:31.03.2018 ರ ಅಂತಿಮ ಶಿಲ್ಕು	775
6	ದಿನಾಂಕ:31.03.2018 ರ ಭಾರತಿಯ ಸ್ಟೆಟ್ ಬ್ಯಾಂಕ್ ಎ.ಡಿ.ಬಿ ಶಾಖಾ ಜಮಖಂಡಿ ಉಳಿತಾಯ ಖಾತೆ ಸಂಖ್ಯೆ:349738856304 ರಲ್ಲಿ ಶಿಲ್ಕು	775
7	ವ್ಯತ್ಯಾಸ	ಇಲ್ಲ

ಧನಾದೇಶ ಸಂಖ್ಯೆ: 125259 ದಿನಾಂಕ:31.03.2018 ರಂದು ರೂ. 48,421/–ಗಳನ್ನು ಆಡಳಿತಾಧಿಕಾರಿಗಳು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಬೆಳಗಾವಿ ಕಾರ್ಯಾಲಯಕ್ಕೆ ಹಿಂದಿರುಗಿಸಿರುವರು.

17) ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಕಾಡಾ ಉಪ ವಿಭಾಗ ನಂ.3 ಹಾರೂಗೇರಿ.

ಆರ್ಥಿಕ ಪರಿಸ್ಥಿತಿ

ಅನಂ	ವಿವರ	ಮೊತ್ತ
1	ದಿನಾಂಕ:01.04.2017 ರ ಪ್ರಾರಂಭಿಕ ಶಿಲ್ಕು	11,634.50
2	2017–18 ರಲ್ಲಿ ಜಮೆ	17,29,232.00
3	ಒಟ್ಟು	17,40,866.50
4	2017–18 ರಲ್ಲಿ ವೆಚ್ಚ	17,30,866.50
5	ದಿನಾಂಕ:31.03.2018 ರ ಅಂತಿಮ ಶಿಲ್ಕು	10,000.00
6	ದಿನಾಂಕ:31.03.2018 ರ ಭಾರತಿಯ ಸ್ಟೆಟ್ ಬ್ಯಾಂಕ್ ಶಾಖಾ ಹಾರೂಗೇರಿ ಚಾಲ್ತಿ ಖಾತೆ ಸಂಖ್ಯೆ:35775516365 ರಲ್ಲಿ ಶಿಲ್ಕು	85,509.50
7	ವ್ಯತ್ಯಾಸ	75,509.50

ವ್ಯತ್ಯಾಸದ ವಿವರ:–

ನಗದಿಕರಣಗೊಳ್ಳದ ಧನಾದೇಶಗಳು

ಕ್ರ.ಸಂ	ಧನಾದೇಶ ಸಂಖ್ಯೆ	ದಿನಾಂಕ	ಮೊತ್ತ
1	850924	15.03.2018	5,240.00
2	850925	15.03.2018	8,615.00
3	850926	28.03.2018	1,700.00
4	850927	31.03.2018	59,954.50
		ಒಟ್ಟು	**75,509.50**

ಧನಾದೇಶ ಸಂಖ್ಯೆ: 850927 ದಿನಾಂಕ:31.03.2018 ರಂದು ರೂ. 59,954.50 ಗಳನ್ನು ಆಡಳಿತಾಧಿಕಾರಿಗಳು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಬೆಳಗಾವಿ ಕಾರ್ಯಾಲಯಕ್ಕೆ ಹಿಂದಿರುಗಿಸಿರುವರು.

18) ಕಾರ್ಯ ನಿರ್ವಾಹಣಾ ಅಭಿಯಂತರರು ಕಾಡಾ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ವಿಭಾಗ ನಂ.3 ಚಿಕ್ಕೋಡಿ. :-

ಬ್ಯಾಂಕ್ ಖಾತೆ ಸಂಖ್ಯೆ: 35772785922

ಅನಂ	ವಿವರ	ಮೊತ್ತ
1	ದಿನಾಂಕ:01-04-2017ಕ್ಕೆ ಪ್ರಾರಂಭಿಕ ಶಿಲ್ಕು	11,000.50
2	2017-18ರಲ್ಲಿ ಸ್ವೀಕರಿಸಿದ ಜಮೆ	1788268.00
3	ಇತರೆ	41700/-
4	ಹಬ್ಬದ ಮುಂಗಡ ಜಮೆ	4000/-
5	ಒಟ್ಟು	1844968.50
6	2017-18ರಲ್ಲಿ ಖರ್ಚು	1748225.00
7	ಉಳಿದ ಶಿಲ್ಕು	96743.50
8	ಚೆಕ್ ನಂ. 852983 ದಿನಾಂಕ:31.03.2018 ರಂದು ಡಿಡಿ ಮುಖಾಂತರ ಆಡಳಿತಾಧಿಕಾರಿಗಳು ಕಾಡಾ ಕಚೇರಿ ಬೆಳಗಾವಿಗೆ ಕಳುಹಿಸಿದ ರೂ.85382/-	85382.00
9	ಉಳಿದ ಮೊತ್ತ	11361.50
10	ಬ್ಯಾಂಕ್ ಚಾರ್ಜಸ್	826.00
11	ದಿನಾಂಕ:31-03-2018ಕ್ಕೆ ಕೊನೆಯ ಶಿಲ್ಕು	10535.50

ಬ್ಯಾಂಕ್ ಪಾಸ್ ಪುಸ್ತಕ ಪ್ರಕಾರ 31-03-2018ಕ್ಕೆ ಕೊನೆಯ ಶಿಲ್ಕು ರೂ.1,81,291.50

ನಗದು ಪುಸ್ತಕದ ಪ್ರಕಾರ ಅಂತಿಮ ಶಿಲ್ಕು 31-3-2018ಕ್ಕೆ ಕೊನೆಯ ಶಿಲ್ಕು ರೂ.10,535.50

ಶಿಲ್ಕಿನ ವ್ಯತ್ಯಾಸ ರೂ.1,70,756.00

ವ್ಯತ್ಯಾಸಕ್ಕೆ ಕಾರಣ ನಗದೀಕರಣಗೊಳ್ಳದ ಚೆಕ್ಕುಗಳ ವಿವರ ಈ ಕೆಳ ಕಾಣಿಸಿದಂತಿದೆ.

1	852949	2075
2	852957	2075
3	852970	2075
4	852973	16555
5	852974	202
6	852975	155
7	852976	5000
8	852981	6000
9	852982	52937
10	852983	85382
	ಒಟ್ಟು	**1,72,456**
ಟಿಪ್ಪಣಿ	31-3-2018ರಂದು ನಗದು ಪುಸ್ತಕ್ಕೆ ಜಮೆಯಾದ ಮೊತ್ತ 03-04-2018ರಂದು ಬ್ಯಾಂಕಿಗೆ ಜಮೆಯಾಗಿದ್ದು ಇರುತ್ತದೆ.	(-)1700
	ಒಟ್ಟು	**1,70,756**

19)ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾಡಾ ಇಂಜಿನಿಯರಿಂಗ್ ಉಪವಿಭಾಗ-02 ಮಲಪ್ರಭಾ ಮತ್ತು ಘಟಪ್ರಭಾ ಯೋಜನೆ ಅಥಣಿ :-

ಬ್ಯಾಂಕ ವಿವರ :- ಎಸ್.ಬಿ.ಐ ಅಥಣಿ ಬ್ಯಾಂಕ್ ಖಾತೆ ಸಂಖ್ಯೆ: 34465686407

ಅನಂ	ವಿವರ	ಮೊತ್ತ
1	ದಿನಾಂಕ:01-04-2017ಕ್ಕೆ ಪ್ರಾರಂಭಿಕ ಶಿಲ್ಕು	1,000/-
2	2017-18ರಲ್ಲಿ ಅನುದಾನ ಜಮೆ	1262000/-
	2017-18ರಲ್ಲಿ ಬಡ್ಡಿ ಜಮೆ	649/-
3	ಒಟ್ಟು	1263649/-
4	2017-18ರಲ್ಲಿ ಖರ್ಚು	1257862.50/-
5	ಡಿ.ಡಿ. ನಂ.872883 ದಿನಾಂಕ: 31-03-2018 ರಂದು ಕಾಡಾ ಕಚೇರಿಗೆ ಬೆಳಗಾವಿಗೆ ಕಳುಹಿಸಿದ್ದು ಇರುತ್ತದೆ.	4786.50/-
6	ದಿನಾಂಕ:31-03-2018ಕ್ಕೆ ಕೊನೆಯ ಶಿಲ್ಕು	1000/-

ಬ್ಯಾಂಕ್ ಪುಸ್ತಕದ ಪ್ರಕಾರ ಅಂತಿಮ ಶಿಲ್ಕು 1000/-
ನಗದು ಪುಸ್ತಕದ ಪ್ರಕಾರ ಅಂತಿಮ ಶಿಲ್ಕು 1000/-
ವ್ಯತ್ಯಾಸ ಇರುವುದಿಲ್ಲ.

20)ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾಡಾ ಉಪವಿಭಾಗ ನಂ-4 ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಜಮಖಂಡಿ:-

ಬ್ಯಾಂಕ ವಿವರ :- ಎಸ್.ಬಿ.ಐ ಜಮಖಂಡಿ ಖಾತೆ ಸಂಖ್ಯೆ: 35795241022

ಅನಂ	ವಿವರ	ಮೊತ್ತ
1	ದಿನಾಂಕ:01-04-2017ಕ್ಕೆ ಪ್ರಾರಂಭಿಕ ಶಿಲ್ಕು	950/-
2	2017-18ಲ್ಲಿ ಸ್ವೀಕರಿಸಿದ ಅನುದಾನ	885500/-
3	ಒಟ್ಟು	886450/-
4	2017-18ರಲ್ಲಿ ಖರ್ಚು	885450/-
5	ದಿನಾಂಕ: 31-03-2018ಕ್ಕೆ ಕೊನೆಯ ಶಿಲ್ಕು	1000/-

ಡಿ.ಡಿ. ಸಂಖ್ಯೆ: 125260 ದಿನಾಂಕ: 31-03-2018ಕ್ಕೆ ಡಿ.ಡಿ ಮೊತ್ತ ರೂ 16866/- ಆಡಳಿತಾಧಿಕಾರಿಗಳು ಕಾಡಾ ಕಚೇರಿ ಬೆಳಗಾವಿ ಇವರಿಗೆ ಕಳುಹಿಸಲಾಗಿದೆ.

1) ಬ್ಯಾಂಕ್ ಪ್ರಕಾರ ದಿ: 31-03-2018ಕ್ಕೆ ಶಿಲ್ಕು ರೂ.1000/-
2) ನಗದು ಪುಸ್ತಕ ಪ್ರಕಾರ ದಿ: 31-03-2018 ಕ್ಕೆ ಶಿಲ್ಕು ರೂ.1000/-

21)ಸಹಾಯಕ ಕೃಷಿ ನಿರ್ದೇಶಕರು ಕಾಡಾ ಮಲಪ್ರಭಾ ಯೋಜನೆಗಳು, (ಕೃಷಿ ಮತ್ತು ಸಹಕಾರ) ಉಪ ವಿಭಾಗ-01 ಧಾರವಾಡ:-

ಬ್ಯಾಂಕ ವಿವರ :- ಎಸ್.ಬಿ.ಐ ಧಾರವಾಡ ಖಾತೆ ಸಂಖ್ಯೆ: 34240867931

ಅನಂ	ವಿವರ	ಮೊತ್ತ
1	ದಿನಾಂಕ:01-04-2017ಕ್ಕೆ ಪ್ರಾರಂಭಿಕ ಶಿಲ್ಕು	11,810/-
2	2017-18ರಲ್ಲಿ ಸ್ವೀಕರಿಸಿದ ಅನುದಾನ	6497000/-
3	ಹಾಗೂ ಬಡ್ಡಿ ಮತ್ತು ಇತರೆ ಜಮಾ	28603/-
4	ಒಟ್ಟು	6537413/-
5	2017-18ರಲ್ಲಿ ಖರ್ಚು	6500503/-
6	ಚೆಕ್ಕ ನಂಬರ: 695366 ದಿ: 31-03-2018 ಡಿ.ಡಿ ನಂಬರ. 417275 ದಿ: 31-03-2018 ರಂದು ಕಾಡಾ ಕಚೇರಿ ಬೆಳಗಾವಿಗೆ ಭರಣಾ ಮಾಡಿದ್ದು	32559/-
7	ದಿನಾಂಕ:31-03-2018ಕ್ಕೆ ಕೊನೆಯ ಶಿಲ್ಕು	4351/-

1) ಬ್ಯಾಂಕ ಪ್ರಕಾರ ದಿನಾಂಕ: 31-03-2018ಕ್ಕೆ ಶಿಲ್ಕು ರೂ.4351/-
2) ನಗದು ಪುಸ್ತಕದ ಪ್ರಕಾರ ದಿ: 31-03-2018ಕ್ಕೆ ಶಿಲ್ಕು ರೂ.4351/-

22)ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾಡಾ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಉಪವಿಭಾಗ ನಂ-5 ರಾಮದುರ್ಗ :-

ಬ್ಯಾಂಕ್ ವಿವರ :- ಎಸ್.ಬಿ.ಐ ರಾಮದುರ್ಗ ಖಾತೆ ಸಂಖ್ಯೆ: 35746021933.

ಅನಂ	ವಿವರ	ಮೊತ್ತ
1	ದಿನಾಂಕ:01-04-2017ಕ್ಕೆ ಪ್ರಾರಂಭಿಕ ಶಿಲ್ಕು	4579/-
2	2017-18ರಲ್ಲಿ ಸ್ವೀಕರಿಸಿದ ಅನುದಾನ	1437042/-
3	ಒಟ್ಟು	1441621/-
4	2017-18ರಲ್ಲಿ ಖರ್ಚು	1436019/-
5	ದಿನಾಂಕ:31-03-2018ಕ್ಕೆ ಕೊನೆಯ ಶಿಲ್ಕು	5602/-

ಶಿಲ್ಕಿನ ವಿವರ:-

1) ಬ್ಯಾಂಕಿನ ಶಿಲ್ಕು 31-03-2018ಕ್ಕೆ :	ರೂ.8683/-
2) 2017-18ನೇ ಸಾಲಿನಲ್ಲಿ ಚೆಕ್ ನಂ. 257816 ದಿ: 31-03-2018 ರಂದು ಆಡಳಿತಾಧಿಕಾರಿಗಳು	(-)
ಕಾಡಾ ಕಚೇರಿ ಬೆಳಗಾವಿಗೆ ಕಳುಹಿಸಲಾಗಿದೆ.	ರೂ.3081/-
3) 31-03-2018ಕ್ಕೆ ನಗದು ಪುಸ್ತಕ ಪ್ರಕಾರ ಶಿಲ್ಕು	ರೂ.5602/-

23) ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಏಕಕಾಲಿಕ ಕಾರ್ಯನಿರ್ವಹಣಾ ಅನುದಾನ ಮಂಜೂರು ನೀಡುತ್ತಿರುವ ಬಗ್ಗೆ :-

ರೈತರ ಸಹಭಾಗಿತ್ವದಲ್ಲಿ ನೀರು ನಿರ್ವಹಣೆ ಯೋಜನೆಯನ್ವಯ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಏಕಕಾಲಿಕ ಕಾರ್ಯನಿರ್ವಹಣಾ ಅನುದಾನ ಮಂಜೂರು ಮಾಡಲಾಗುತ್ತಿದೆ. ಪ್ರಸ್ತುತ 2017-18ನೇ ಸಾಲಿನಲ್ಲಿ ಒಟ್ಟು ಮೂರು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಅನುದಾನ ಮಂಜೂರು ಮಾಡಲಾಗಿದೆ. ದಾಖಲೆಗಳ ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿವೆ.

1) ಕಾಡಾ ಪ್ರಾಧಿಕಾರದಿಂದ ಮಲಪ್ರಭಾ ಯೋಜನೆಯಲ್ಲಿ ಒಟ್ಟು ಎಷ್ಟು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಏಕಕಾಲಿಕ ಕಾರ್ಯನಿರ್ವಹಣಾ ಅನುದಾನ ನೀಡಲಾಗಿದೆ. ಪ್ರಸ್ತುತ ಮಾರ್ಚ-2018ರ ಅಂತ್ಯಕ್ಕೆ ಎಷ್ಟು ಸಂಘಗಳು ಚಾಲ್ತಿಯಲ್ಲಿವೆ. 5 ವರ್ಷ ಮುಕ್ತಾಯ ತದನಂತರ ಅನುದಾನ ಮರಳಿ ಪಡೆಯಲಾಗಿದೆಯೋ ಮರು ನವೀಕರಣ ಮಾಡಿಕೊಂಡ ಕುರಿತು ವಿವರ ನೀಡುವುದು.
2) ಕಾಡಾ ಪ್ರಾಧಿಕಾರದ ಘಟಪ್ರಭಾ ಯೋಜನೆಯಡಿ ಒಟ್ಟು ಎಷ್ಟು ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಏಕಕಾಲಿಕ ಕಾರ್ಯನಿರ್ವಹಣಾ ಅನುದಾನ ನೀಡಲಾಗಿದೆ. ಪ್ರಸ್ತುತ ಮಾರ್ಚ-2018ರ ಅಂತ್ಯಕ್ಕೆ ಎಷ್ಟು ಸಂಘಗಳು ಚಾಲ್ತಿಯಲ್ಲಿವೆ, 5 ವರ್ಷ ಮುಕ್ತಾಯದ ತದನಂತರ ಮೊತ್ತ ಮರಳಿ ಪಡೆದ ಬಗ್ಗೆ ಹಾಗೂ ಮರು ನವೀಕರಣಗೊಂಡ ಕುರಿತು ಮಾಹಿತಿ ನೀಡುವುದು.
3) ಕಾಡಾ ಪ್ರಾಧಿಕಾರದಿಂದ ನೀರು ಬಳಕೆದಾರರ ಸಹಕಾಯ ಸಂಘಗಳಿಗೆ (ಮಲಪ್ರಭಾ ಮತ್ತು ಘಟಪ್ರಭಾ ಯೋಜನೆ) ನೀಡುವ ಏಕಕಾಲಿಕ ಕಾರ್ಯನಿರ್ವಹಣಾ ಅನುದಾನ ಒಟ್ಟು ಮುದ್ದತ ಠೇವಣಿಗಳ ಬ್ಯಾಂಕಿನಲ್ಲಿ ಹೂಡಿರುವ ಬಗ್ಗೆ 2017-18ನೇ ಸಾಲಿನ ಅಂತ್ಯಕ್ಕೆ ಸಂಬಂಧಿಸಿದಂತೆ ಬ್ಯಾಂಕನಿಂದ ಪಡೆದ ದೃಢೀಕರಣ ಪತ್ರ ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವುದು.
4) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಕರ್ನಾಟಕ ನೀರಾವರಿ ಕಾಯ್ದೆ 1965 ರನ್ವಯ ವಾರ್ಷಿಕ ಲೆಕ್ಕ ಪರಿಶೋಧನೆ ಒಟ್ಟು ಎಷ್ಟು ಸಂಘಗಳ ಕುರಿತು ಕೈಕೊಳ್ಳಲಾಗಿದೆ ಹಾಗೂ ಬಾಕಿ ಇರುವ ಬಗ್ಗೆ ಮಾಹಿತಿ ನೀಡುವುದು.

ಈ ಮೇಲಿನ ಅಂಶಗಳ ಕುರಿತು ಸೂಕ್ತ ದಾಖಲೆಗಳೊಂದಿಗೆ ವಿವರ ಲೆಕ್ಕ ಪರಿಶೋಧನೆಗೆ ನೀಡಲು ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:07 ದಿನಾಂಕ:10-12-2018 ರಂದು ಕೇಳಲಾಗಿ ಯಾವುದೇ ಉತ್ತರ ನೀಡಿರುವುದಿಲ್ಲ ದಾಖಲಾತಿಗಳೊಂದಿಗೆ ವಿವರಣೆ ನೀಡಲು ಸೂಚಿಸಿದೆ.

24) ಕಾಡಾ ಪ್ರಾಧಿಕಾರದಲ್ಲಿ ದಿ: 01–04–2006 ರಂದು ಮತ್ತು ತದನಂತರದಲ್ಲಿ ಹೊಸದಾಗಿ ನೇಮಕಾತಿ ಹಾಗೂ ಕಾಡಾ ಪ್ರಾಧಿಕಾರಕ್ಕೆ ನಿಯೋಜನೆ ಮೇರೆಗೆ ಹಾಜರಾಗುವ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ಹೊಸ ಪಿಂಚಣಿ ಯೋಜನೆ(N.P.S) ಅನುಷ್ಠಾನ ಕುರಿತು :–

ಕರ್ನಾಟಕ ಸರ್ಕಾರವು New Pension Scheme(N.P.S)ನ್ನು ರಾಜ್ಯ ಸರ್ಕಾರದ ಸೇವೆ ದಿ: 01–04–2006 ರಂದು ಮತ್ತು ತದನಂತರದಲ್ಲಿ ಸೇವೆಗೆ ಸೇರಿದವರಿಗೆ ಮತ್ತು ಕೇಂದ್ರ ಸರ್ಕಾರದ ಸೇವೆಗೆ ದಿ: 01–04–2004 ರಂದು ಮತ್ತು ತದನಂತರದಲ್ಲಿ ಸೇವೆಗೆ ಸೇರಿದವರಿಗೆ ಅನ್ವಯಗೊಳಿಸಿರುತ್ತಾರೆ.

New Pension Scheme(N.P.S) ಇದು ದಿ: 01–04–2006 ರಂದು ಮತ್ತು ತದನಂತದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿದ ನೌಕರರಿಗೆ ಕಡ್ಡಾಯವಾಗಿರುತ್ತದೆ. ನೌಕರರ ಮೂಲ ವೇತನ ಹಾಗೂ ತುಟ್ಟಿ ಭತ್ಯೆಯ ಶೇ.10 ರಷ್ಟು ಪ್ರತಿ ಮಾಹೆಯ ಕಡಿತಗೊಳಿಸಬೇಕಿದ್ದು, ಮತ್ತು ರಾಜ್ಯ ಸರ್ಕಾರವು ಅದಕ್ಕೆ ಸಮನಾದ ಮೊತ್ತ ನೀಡಬೇಕಾಗಿದೆ. ಕರ್ನಾಟಕ ಸರ್ಕಾರವು New Pension Schemeನ್ನು Pension Fund Regulatory and Development Authority(PFRDA) ದಿಂದಾ ಶಿಫಾರಸ್ಸುಗೊಳಿಸಿರುತ್ತದೆ. State Autonomous Bodies/Boards/ Corporations/Societies/Universities/State Aided Institutions Under Various Departments of State Governmentದಲ್ಲಿ ದಿ: 01–04–2006 ರ ಪೂರ್ವದಲ್ಲಿ ನೇಮಕಾತಿ ಹೊಂದಿದವರಿಗೆ Old Pension Scheme ಜಾರಿಯಲ್ಲಿದ್ದು, ಆದರೆ ದಿ: 01–04–2006 ರಂದು ತದನಂತರದಲ್ಲಿ ನೇಮಕಾತಿ ಹೊಂದಿದ ನೌಕರರಿಗೆ Old Pension Scheme ಸಲ್ಲಿಸಿದ್ದು, ಎನ್.ಪಿ.ಎಸ್. ಕಡ್ಡಾಯಗೊಳಿಸಲಾಗಿದೆ. ಈ Schemeನಲ್ಲಿ ಆಯಾ ಸಂಸ್ಥೆಗಳು Employers Contribution ತನ್ನ ಸ್ವಂತ ಸಂಪನ್ಮೂಲಗಳಿಂದ ಭರಿಸಬೇಕಿದೆ ರಾಜ್ಯ ಸರ್ಕಾರದಿಂದ ಪ್ರತ್ಯೇಕ ಅನುದಾನ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆ ಸಂ.Fd(Spl)209PEN/2012 dated: 21-02-2015 ಮತ್ತು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆ ಸಂ. FD(Spl)209/PEN/2012(P) dated: 27-04-2016 ಈ ಎರಡು ಸರ್ಕಾರದ ಸುತ್ತೋಲೆಗಳಲ್ಲಿ Autonomous Bodies/Boards/Corporations/Societies/Universities NPS ನ್ನು ಯಾವ ರೀತಿ ಅನುಷ್ಠಾನಗೊಳಿಸಬೇಕೆಂಬ ಬಗ್ಗೆ ಸ್ಪಷ್ಟಪಡಿಸಲಾಗಿದೆ. ಕಾರಣ ತಮ್ಮ ಪ್ರಾಧಿಕಾರದಲ್ಲಿ ನೌಕರರ ಹಾಗೂ ಅಧಿಕಾರಿಗಳ ವೇತನ ಹಾಗೂ ಭತ್ಯೆಗಳ ಪಾವತಿಗಳನ್ನು ಗಮನಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

1) ಕಾಡಾ ಪ್ರಾಧಿಕಾರದಲ್ಲಿ ದಿ: 01-04-2006 ರಂದು ಮತ್ತು ತದನಂತರದಲ್ಲಿ ಹೊಸದಾಗಿ ನೇಮಕಾತಿ ಹೊಂದಿ ಹೊಸ ಪಿಂಚಣಿ ಯೋಜನೆ(ಎನ್.ಪಿ.ಎಸ್) ಅಡಿ ಬರುವ ಅಧಿಕಾರಿ ಸಿಬ್ಬಂದಿಗಳ ಮಾಹಿತಿಯನ್ನು ಲೆಕ್ಕಪರಿಶೋಧನೆಗೆ ಒದಗಿಸುವುದು.

2) ಕಾಡಾ ಪ್ರಾಧಿಕಾರದಲ್ಲಿ ಹೊಸದಾಗಿ ನೇಮಕಾತಿ ಹೊಂದಿ ಹೊಸ ಪಿಂಚಣಿ ಯೋಜನೆಅಡಿ ಬರುವ ಅಧಿಕಾರಿ, ಸಿಬ್ಬಂದಿಗಳ ವೇತನದಲ್ಲಿ ಕಡಿತಗೊಳಿಸಬೇಕಾದ ಶೇ.10 ರಷ್ಟು (Basic + DA) ಮೊತ್ತ ಹಾಗೂ ಪ್ರಾಧಿಕಾರದಿಂದ ಶೇ.10 ರಷ್ಟು ಅಂದರೆ Employee ಹಾಗೂ Employers ಕಡಿತಗೊಳಿಸಿ ಎನ್.ಪಿ.ಎಸ್ ಅನುಷ್ಠಾನ ಮಾಡದಿರುವ ಕುರಿತು ಸ್ಪಷ್ಟೀಕರಣ ನೀಡುವುದು.

3) ಕಾಡಾ ಪ್ರಾಧಿಕಾರಕ್ಕೆ ನಿಯೋಜನೆ ಮೇಲೆ ಹೊಸ ಪಿಂಚಣಿ ಯೋಜನೆಯ ಸಿಬ್ಬಂದಿ ಅಧಿಕಾರಿ ಹಾಜರಾದ ಪಕ್ಷದಲ್ಲಿ ಅವರ ಎನ್.ಪಿ.ಎಸ್. ವಂತಿಕೆಯನ್ನು ಯಾವ ರೀತಿ ಕಡಿತಗೊಳಿಸಿ ಕ್ರಮ ವಹಿಸಲಾಗಿದೆ ಎಂಬ ಬಗ್ಗೆ ಸ್ಪಷ್ಟೀಕರಣ ನೀಡುವುದು.

ಈ ಮೇಲಿನ ಅಂಶಗಳನ್ನು ಒಳಗೊಂಡಂತೆ New Pension Scheme ಕಾಡಾ ಪ್ರಾಧಿಕಾರದಲ್ಲಿ ಅನುಷ್ಠಾನದ ಕುರಿತು ಇಲ್ಲಿಯವರೆಗೆ ಕೈಗೊಂಡ ಕ್ರಮಗಳ ಬಗ್ಗೆ ಲೆಕ್ಕಪರಿಶೋಧನೆಗೆ ವಿವರಣೆಯನ್ನು ನೀಡಲು ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:05 ದಿನಾಂಕ:07-12-2018 ರಂದು ನೀಡಲಾಗಿ ಯಾವುದೇ ಉತ್ತರ ನೀಡಿರುವುದಿಲ್ಲ. ಕಾರಣ ಲೆಕ್ಕಪರಿಶೋಧನೆಗೆ ಸೂಕ್ತ ಅನುಸರಣೆ ನೀಡಲು ಸೂಚಿಸಿದೆ.

25)ಕಾಡಾ ಆಸ್ತಿ ವಹಿ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವ ಕುರಿತು:-

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ Karnataka Public Works Departmental Code:2014 ಪ್ಯಾರಾ 298ರನುಸಾರ ಆಸ್ತಿ ವಹಿ ಹಾಗೂ ಸಂಬಂಧಿಸಿದ ದಾಖಲೆಗಳನ್ನು ನಿರ್ವಹಿಸಬೇಕಾಗಿರುತ್ತದೆ. ವಿವರ ಈ ಕೆಳಗಿನಂತಿದೆ.

1) Immovable Properties In Form PWF: 21
2) Register of Building In Form PWF: 22
3) Register of Leased Land PWF: 24
4) Bridge And Culverts PWF: 25

ಕಾಡಾ ಅಭಿವೃದ್ಧಿ ಪ್ರಾಧಿಕಾರದ ಚರಾಸ್ತಿ ಮತ್ತು ಸ್ಥಿರಾಸ್ತಿಗಳಿಗೆ ಸಂಬಂಧಪಟ್ಟ ವಹಿಗಳು ಹಾಗೂ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:03 ದಿನಾಂಕ:06-12-2018 ರಂದು ನೀಡಲಾಗಿತ್ತು ದಿನಾಂಕ:11.12.2018 ರಂದು ಸಂಸ್ಥೆಯವರು ನೀಡಿರುವ ಉತ್ತರದಲ್ಲಿ ಸದರಿ ರಜಿಸ್ಟರಗಳನ್ನು ನಿರ್ವಹಿಸಲಾಗುವುದು ಎಂದು ತಿಳಿಸಿದ್ದು, ಆದ್ದರಿಂದ ಇದು ಭರವಸೆಯ ಉತ್ತರವಾಗಿರುತ್ತದೆ. ಕಾರಣ ದಾಖಲೆಗಳನ್ನು ನಿರ್ವಹಿಸಿ, ಕಾಲೋಚಿತಗೊಳಿಸಿ ಮುಂದಿನ ಲೆಕ್ಕಪರಿಶೋಧನೆಗೆ ಹಾಜರಪಡಿಸಲು ತಿಳಿಸಿದೆ.

26)ಕಾಡಾ ಪ್ರಾಧಿಕಾರದ ವಸತಿ ಗೃಹಗಳ ಕುರಿತು :-

2017-18ನೇ ಸಾಲಿನ ಕಾಡಾ ಪ್ರಾಧಿಕಾರದ ವಸತಿಗೃಹಗಳ ಬಾಡಿಗೆ ಸಂಬಂದಪಟ್ಟಂತೆ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

1) ಕಾಡಾ ಪ್ರಾಧಿಕಾರದಡಿ ಒಟ್ಟು ಎಷ್ಟು ವಸತಿ ಗೃಹಗಳು ಇರುತ್ತವೆ. (ಗ್ರೂಪ A,B,C,D)
2) ಒಟ್ಟು ವಸತಿ ಗೃಹಗಳಲ್ಲಿ ಹಂಚಿಕೆ ಮಾಡಲಾದ ವಸತಿ ಗೃಹಗಳೆಷ್ಟು ಹಾಗೂ ಖಾಲಿ ಇರುವ ವಸತಿ ಗೃಹಗಳೆಷ್ಟು? (ಗ್ರೂಪ A,B,C,D)
3) ಪ್ರಾಧಿಕಾರದ ಒಟ್ಟು ವಸತಿ ಗೃಹಗಳಲ್ಲಿ ಪ್ರಾಧಿಕಾರದ ಸಿಬ್ಬಂದಿಗಳೆಷ್ಟು ಹಾಗೂ ಹೊರಗಿನಿಂದ, ಬೇರೆ ಇಲಾಖೆಗಳಿಂದ ಇರುವ ಸಿಬ್ಬಂದಿಗಳೆಷ್ಟು?
4) ಕಾಡಾ ಪ್ರಾಧಿಕಾರದ ಸಿಬ್ಬಂದಿಗಳ ವೇತನದಲ್ಲಿ HRA ಕಡಿತಗೊಳಿಸಲಾಗುತ್ತಿದ್ದು ಗಮನಿಸಲಾಗಿದೆ. ಬೇರೆ ಇಲಾಖೆಗಳಿಂದ ಇರುವ ಸಿಬ್ಬಂದಿಗಳ ಬಾಡಿಗೆ ಮೊತ್ತವನ್ನು ಪ್ರತಿ ಮಾಹೆ ಭರಿಸಬೇಕಾಗಿರುತ್ತದೆ. ಸದರಿ ಭರಿಸಿದ ಮಾಹಿತಿ ವಿವರ ಲೆಕ್ಕಪರಿಶೋಧನೆಗೆ ಲಭ್ಯಪಡಿಸುವುದು.
5) ಮಾರ್ಚ-2018 ರ ಅಂತ್ಯಕ್ಕೆ ಬರಬೇಕಾದ ಬಾಡಿಗೆ ಮೊತ್ತ ಹಾಗೂ ಬಾಕಿ ಮೊತ್ತದ ಬಗ್ಗೆ ವಿವರ ನೀಡುವುದು.

ಈ ಮೇಲಿನ ಅಂಶಗಳ ಕುರಿತು ಲೆಕ್ಕಪರಿಶೋಧನೆಗೆ ವಿವರಣೆ ನೀಡಲು ಕೋರಿ ಲೆಕ್ಕ ಪರಿಶೋಧನಾ ವಿಚಾರಣೆ ಪತ್ರ ಸಂಖ್ಯೆ: 23 ದಿನಾಂಕ: 18-12-2018 ರಂದು ಕೇಳಲಾಗಿ ಕಾಡಾ ಪ್ರಾಧಿಕಾರದಿಂದ ಯಾವುದೇ ಉತ್ತರ ನೀಡಿರುವುದಿಲ್ಲ. ಸೂಕ್ತ ಮಾಹಿತಿ ವಿವರ ಸಲ್ಲಿಸಲು ಸೂಚಿಸಿದೆ.

27)ಹೆಚ್ಚುವರಿ ಕ್ರಿಯಾ ಯೋಜನೆ ಮೊತ್ತಗಳಿಗೆ ಸರ್ಕಾರದಿಂದ ಅನುಮೋದನೆಯಾದ ದಾಖಲೆ ಪೂರೈಸುವ ಕುರಿತು :-

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಬೆಳಗಾವಿ 2017-18ನೇ ಸಾಲಿನಲ್ಲಿ ವಿವಿಧ ಯೋಜನೆಗಳ/ಕಾರ್ಯಕ್ರಮಗಳ ಅಡಿಯಲ್ಲಿ

1) ದಿನಾಂಕ: 03-08-2017 ರಂದು ಸರ್ಕಾರದರಿಂದ ಅನುಮೋದನೆಯಾದ 2017-18ನೇ ಸಾಲಿನ ಕ್ರಿಯಾ ಯೋಜನೆ (NABARD RIDF:21 & 22 (Ayacut Road) ಹೊರತುಪಡಿಸಿ) ಒಟ್ಟು ಮೊತ್ತ
ರೂ. 2507.00 ಲಕ್ಷ ಇರುತ್ತದೆ.
2) ದಿನಾಂಕ: 05-06-2018 ರಂದು ನಿರ್ದೇಶಕರು ಅ.ಪ್ರ.ಪ್ರಾ.ನಿರ್ದೇಶನಾಲಯ ಬೆಂಗಳೂರು ಇವರ ಮುಖಾಂತರ (1) 2017-18ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆ ಒಟ್ಟು ಮೊತ್ತ 3907.00 ಲಕ್ಷ (2) 2017-18ನೇ ಸಾಲಿಗೆ ಪ್ರಸ್ತಾಪಿತ ಪರಿಷ್ಕೃತ ಕ್ರಿಯಾ ಯೋಜನೆಯ ಒಟ್ಟು ಮೊತ್ತ

4207.00 ಲಕ್ಷ ಸರಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಿದ್ದು ಇರುತ್ತದೆ. ಆದರೆ ಸರಕಾರದಿಂದ ಪರಿಷ್ಕೃತ ಕ್ರಿಯಾ ಯೋಜನೆಯ ಪ್ರತಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

3) ಸರಕಾರದಿಂದ ಲೆಕ್ಕ ಶೀರ್ಷಿಕೆ (2705-00-202-0-01-102) ಕಾಡಾ ಕಾಮಗಾರಿಗಳಿಗೆ ಒಟ್ಟು ಮಂಜೂರಾದ ಕ್ರಿಯಾಯೋಜನೆಗಿಂತ ಹೆಚ್ಚಿನ ಖರ್ಚು ಆಗದೆಯಿದ್ದರೂ ಸಹಿತ ವಿವಿಧ ಕಾರ್ಯಕ್ರಮ/ಚಟುವಟಿಕೆಗಳಡಿ ಸರಕಾರದಿಂದ ಅನುಮೋದನೆಗೊಂಡ ಮೊತ್ತಕ್ಕಿಂತ ಹೆಚ್ಚಿಗೆ ಖರ್ಚು ಭರಿಸಿರುವುದು ಕಂಡುಬರುತ್ತದೆ. ವಿವರಗಳು ಈ ಕೆಳಕಾಣಿಸಿದಂತಿರುತ್ತದೆ.

(ರೂ.ಲಕ್ಷಗಳಲ್ಲಿ)

ಅ ನಂ	ಯೋಜನೆಗಳು/ಕಾರ್ಯಕ್ರಮಗಳ ವಿವರ	2017-18ನೇ ಸಾಲಿನಲ್ಲಿ ಅನುಮೋದಿತ ಕ್ರಿಯಾ ಯೋಜನೆ ಮೊತ್ತ	2017-18ನೇ ಸಾಲಿಗೆ ಪ್ರಸ್ತಾಪಿತ ಪರಿಷ್ಕೃತ ಕ್ರಿಯಾ ಯೋಜನೆ ಮೊತ್ತ	2017-18ನೇ ಸಾಲಿನಲ್ಲಿ ವೆಚ್ಚ ಭರಿಸಿದ್ದು (ಅನುಬಂಧ: 4ರಲ್ಲಿ ಲಗತ್ತಿಸಿದೆ)	ಅನುಮೋದನೆಯಾಗದೇ ಹೆಚ್ಚುವರಿಯಾದ ಕ್ರಿಯಾ ಯೋಜನೆ ಮೊತ್ತ (3-4)
1	2	3	4	5	6
I	**Central Sector Schemes**				
1	Land Reclamation	774.53	1258.21	1258.21	483.68
II	**State Sector Scheme**				
1	Construction of ayacut Road (Km)	175.00	285.36	285.36	110.36
	Total (1)	**949.53**	**1543.57**	**1543.57**	**594.04**
III	**Nabard**				
1	RIDF:21 (Ayacut Road)(km)	500.00	910.88	910.87	410.88
2	RIDF: 22 (Ayacut Roads) (Km)	99.92	303.58	303.58	203.66
	Total (2)	**599.92**	**1214.46**	**1214.45**	**614.54**
	Total (1+2)	**1549.45**	**2758.03**	**2758.02**	**1208.58**

Nabard ಲೆಕ್ಕ ಶೀರ್ಷಿಕೆ (2705-00-102-0-01-101-436)ರಲ್ಲಿ ಸರ್ಕಾರದಿಂದ ರೂ.1400.00 ಲಕ್ಷಗಳಿಗೆ ಕ್ರಿಯಾ ಯೋಜನೆ ಅನುಮೋದನೆ ನೀಡಿದ್ದರೂ, ರೂ.1700.00 ಲಕ್ಷಗಳಷ್ಟು ಅಂದರೆ ರೂ.300.00 ಲಕ್ಷಗಳ ಹೆಚ್ಚುವರಿ ಖರ್ಚು ಭರಿಸಲಾಗಿದೆ. ಈ ಮೇಲ್ಕಾಣಿಸಿದಂತೆ ವಿವಿಧ ಕಾರ್ಯಕ್ರಮಗಳಿಗೆ ಸರ್ಕಾರದಿಂದ ಕ್ರಿಯಾ ಯೋಜನೆಯಲ್ಲಿ ನಿಗದಿಪಡಿಸಿದ ಅನುದಾನಕ್ಕಿಂತ ಹೆಚ್ಚಿಗೆ ಖರ್ಚು ಭರಿಸಲಾಗಿದೆ.

ಈ ಮೇಲ್ಕಾಣಿಸಿದ ಕೋಷ್ಟಕದಲ್ಲಿ ಸರ್ಕಾರದಿಂದ ವಿವಿಧ ಚಟುವಟಿಕೆಗಳಿಗೆ/ಕಾರ್ಯಕ್ರಮಗಳಿಗೆ ಅನುಮೋದನೆಯಾಗಿರುವ ಕ್ರಿಯಾಯೋಜನೆಯ ಮೊತ್ತಕ್ಕಿಂತ ಹೆಚ್ಚುವರಿಯಾಗಿ ವೆಚ್ಚ ಭರಿಸಿರುವುದಕ್ಕಾಗಿ ಸರ್ಕಾರದಿಂದ ಅನುಮೋದಿತ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಲೆಕ್ಕಪರಿಶೋಧನೆಗೆ ಪೂರೈಸಲು ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂ.17 ದಿನಾಂಕ: 17-12-2018 ರಂದು ನೀಡಲಾಗಿತ್ತು. ಆದರೆ ಕಾಡಾ ಪ್ರಾಧಿಕಾರದಿಂದ ಯಾವುದೇ ಉತ್ತರ ನೀಡಿರುವುದಿಲ್ಲ.

ಆದ್ದರಿಂದ ಲೆಕ್ಕ ಶೀರ್ಷಿಕೆ 2705-00-202-0-01-102 (ಕಾಡಾ ಕಾಮಗಾರಿ)ಗಳಿಗೆ ರೂ.594.04ಲಕ್ಷ + ಲೆಕ್ಕ ಶೀರ್ಷಿಕೆ 2705-00-102-0-01-101-436 (**Nabard**) ಗಳಿಗೆ ರೂ.614.54 ಲಕ್ಷ ಒಟ್ಟು ಮೊತ್ತ 1208.58 ಲಕ್ಷಗಳಿಗೆ ಪರಿಷ್ಕೃತ ಕ್ರಿಯಾ ಯೋಜನೆಗೆ ಸರ್ಕಾರದಿಂದ ಅನುಮೋದನೆ ಪಡೆದ ದಾಖಲೆಯನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸುವವರೆಗೆ ಆಕ್ಷೇಪಣೆಯಲ್ಲಿಡಲಾಗಿದೆ.

28)ಕಾಮಗಾರಿ ಅವಧಿ ಮೀರಿ ಹೆಚ್ಚುವರಿ ಅವಧಿ ಪಡೆದು ಮುಕ್ತಾಯಗೊಳಿಸಿದ್ದು, ಹೆಚ್ಚುವರಿ ಅವಧಿಗೆ ದಂಡ ರಹಿತ ಅವಧಿ ವಿಸ್ತರಿಸಿರುವ ಬಗ್ಗೆ :-

ಕಾಡಾ ಪ್ರಾಧಿಕಾರದಡಿ ಕೈಕೊಳ್ಳುವ ಕಾಮಗಾರಿ ಟೆಂಡರ್ Documentನಲ್ಲಿ ತಿಳಿಸಿರುವ ಅವಧಿಯಲ್ಲಿ ಕಾಮಗಾರಿ ಮುಕ್ತಾಯಗೊಳಿಸದೇ ಹೆಚ್ಚುವರಿ ಅವಧಿ ಪಡೆದು ಪೂರ್ಣಗೊಳಿಸಿದ್ದು ಮತ್ತು ಹೆಚ್ಚುವರಿ ಅವಧಿಗೆ ದಂಡ ರಹಿತವಾಗಿ ಹಾಗೂ ಯಾವುದೇ ಕಾರಣಗಳನ್ನು ವಿಸ್ತರಣಾ ಆದೇಶದಲ್ಲಿ ನೀಡದೆ ಆದೇಶಿಸಿರುವುದು ಗಮನಿಸಲಾಗಿದೆ.

ಉದಾಹರಣೆ :-

Name of work	Construction of field rated work singarkoppa villages to river in savadatti
Work Order	16-03-2016 Est: 10,47,000
	Tender : 1039166
As Per Period Completion	15-05-2016 Con: ಮಂಜುನಾಥ ವೆಂಕರೆಡ್ಡಿ
Actual Completion	20-02-2018

ಸದರ ಕಾಮಗಾರಿಯಲ್ಲಿ 674 ಹೆಚ್ಚುವರಿ ದಿನಗಳನ್ನು ಪಡೆದು ಕಾಮಗಾರಿ ಮುಕ್ತಾಯಗೊಳಿಸಲಾಗಿದೆ ಮತ್ತು ಸದರಿ ಗುತ್ತಿಗೆದಾರರಿಗೆ ದಂಡ ರಹಿತವಾಗಿ ಅವಧಿ ವಿಸ್ತರಣೆ ಆದೇಶ ನೀಡಲಾಗಿದೆ.

1.Conditions of Contract ನಲ್ಲಿ Clause:22 ರನುಸಾರ Extension of the Intended Completion dateಗೆ ನೀಡಿದ್ದಲ್ಲಿ ಕ್ರಮವಹಿಸಿದ ಬಗ್ಗೆ ದಾಖಲೆಗಳೊಂದಿಗೆ ವಿವರ ನೀಡುವುದು.

2. K/W:1 Section: 05 Contract Data The liquidated damages for the whole of the works. The amount is usually completed on the basis of 0.1% the contract price per day ಎಂದು ತಿಳಿಸಿರುತ್ತಾರೆ ಕ್ರಮವಹಿಸಿಲ್ಲ.

ಲೆಕ್ಕ ಪರಿಶೋಧನೆಗೆ ದಾಖಲೆಗಳೊಂದಿಗೆ ವಿವರ ನೀಡಲು ಕೋರಿ ಲೆಕ್ಕ ಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ:22 ದಿನಾಂಕ: 18/12/2018 ರಂದು ಕೇಳಲಾಗಿ ಪ್ರಾಧಿಕಾರದಿಂದ ಯಾವುದೇ ಉತ್ತರ ನೀಡಿರುವುದಿಲ್ಲ.ಕಾರಣ ರೂ.1,03,916/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

29) ಕಾಡಾ ಪ್ರಾಧಿಕಾರದಡಿ ಕೈಕೊಳ್ಳುವ ಟೆಂಡರ್ ಕಾಮಗಾರಿಗಳಲ್ಲಿ ಕಂಡುಬಂದ ನ್ಯೂನ್ಯತೆಗಳು :

2017–18ನೇ ಸಾಲಿನಲ್ಲಿ ಕಾಡಾ ಪ್ರಾಧಿಕಾರದಿಂದ ಕೈಕೊಂಡ ಟೆಂಡರ್ ಕಾಮಗಾರಿಗಳಲ್ಲಿ ಟೆಂಡರ್ ಪ್ರಕ್ರಿಯೇ ಹಾಗೂ ಕಾಮಗಾರಿ ಬಿಲ್ಲುಗಳಲ್ಲಿ ಕಂಡುಬಂದಿವೆ.

1) ಕರ್ನಾಟಕ ಪಾರದರ್ಶಕತೆ ಅಧನಿಯಮ: 1999, ಅಧಿನಿಯಮ: 13 ರನುಸಾರ Acceptance of Tenderನ್ನು ತುಲನಾತ್ಮಕ ವಿಶ್ಲೇಷಣೆ ಹಾಗೂ ಟೆಂಡರ್‌ನ್ನು ಸ್ವೀಕರಿಸಿದ ಕುರಿತು ಕಾರಣಗಳೊಂದಿಗೆ Procurement entity ಹಾಗೂ Tender Bulletin officerರವರಿಗೆ ಸಲ್ಲಿಸಿಲ್ಲ.
2) ಕಾಡಾ ಪ್ರಾಧಿಕಾರದಡಿ ಮೂರು ವಿಭಾಗಳಲ್ಲಿ 2017–18ನೇ ಸಾಲಿನಲ್ಲಿ ಕರೆದ ಟೆಂಡರ್‌ಗಳಲ್ಲಿ ಎಲ್ಲ ಟೆಂಡರಗಳನ್ನು ಅಲ್ಪಾವಧಿ ಟೆಂಡರ್‌ಗಳಾಗಿ ಆಹ್ವಾನಿಸಲಾಗಿದೆ. ಹೀಗಾಗಿ ಸ್ಪರ್ಧಾತ್ಮಕ ಗುತ್ತಿಗೆ ತಪ್ಪಿಸದಂತಾಗಿದೆ. (ಕರ್ನಾಟಕ ಪಾರದರ್ಶಕತೆ ನಿಯಮಗಳು 2000, ನಿಯಮ 17)
3) ಕರ್ನಾಟಕ ಪಾರದರ್ಶಕತೆ ನಿಯಮಗಳು 2000, ನಿಯಮ 18(2) ರನುಸಾರ ಕ್ರಮವಹಿಸಿರುವುದು ಕಂಡುಬಂದಿರುವುದಿಲ್ಲ.
